ಶ್ರೀ ಯು. ಭೂಪತಿ.—ಅನ್‌ಸ್ಟಾರ್ಡ್ ಲಿಸ್ಟ್‌ನಲ್ಲಿ ಕ್ವೊಶ್ಚನ್ ಸೇರಿಸಿದ್ದಾರೆ,

ಅಧ್ಯಕ್ಷರು.—ಅದನ್ನೇ ನನ್ನ ಚೇಂಬರಿನಲ್ಲಿ ಬಂದು ಕೇಳಿ. ಇಲ್ಲಿ ಹಾಗೆಲ್ಲ ಕೇಳಬಾರದು. ಕುಳಿತುಕೊಳ್ಳಿ.

ಶ್ರೀ ಎಂ.ಎಸ್. ಕೃಷ್ಣನ್.—ಕೋಪ ಮಾಡಿಕೊಳ್ಳಬೇಡಿ. ಸ್ಟಾರ್ಡ್ ಕ್ವೊಶ್ಚನನ್ನು ಅನ್‌ಸ್ಟಾರ್ಡ್ ಕ್ವೊಶ್ಚರ್ ಮಾಡಿಬಿಟ್ಟು.....

ಅಧ್ಯಕ್ಷರು.—ತಾವು ಇಲ್ಲಿ ಕೇಳಬಾರದು. ಏನಾ ಮಾಡಬೇಕೋ ಅಲ್ಲಿ ಕೇಳಿ. ಮಾಡೋಣ.

ಶ್ರೀ ಯು. ಭೂಪತಿ.—ಎಲ್ಲದಕ್ಕೂ ಆಫೀಸಿಗೆ ಬಂದು ನೋಡಿ ಎಂದು ಹೇಳುವುದಾದರೆ ನಾವು ಇಲ್ಲಿ ಏಕೆ ಬರಬೇಕು ?

ಸದಸ್ಯರ ಗೈರುಹಾಜರಿಗೆ ಅನುಮತಿ.

ಅಧ್ಯಕ್ಷರು.—ಆಯಿತು. ಈಗ ಒಂದು ಪ್ರಕಟಣೆ ಇದೆ.

ಅಧ್ಯಕ್ಷರು.—ಶ್ರೀ ಆರ್.ಡಿ. ದೇಸಾಯಿಯವರು ದಿನಾಂಕ.....ರಂದು ಬರೆದ ಪತ್ರವು ನನಗೆ ಬಂದಿದ್ದು ಅದು ಈ ರೀತಿ ಇದೆ, ಶ್ರೀ ಆರ್.ಟಿ. ದೇಸಾಯಿಯವರು ೧೦-೨-೮೬ ರಿಂದ ೧೯-೨-೮೬ರ ತನಕ ಗೈರುಹಾಜರಿರಲು ಅನುಮತಿ ನೀಡುವುದಕ್ಕೆ ಸಭೆಯು ಅಪೇಕ್ಷಿಸುತ್ತದೆಯೇ ?

(ಮಾನ್ಯ ಸದಸ್ಯರಾರೂ ನಿರಾಕರಿಸುವುದಿಲ್ಲ)

ಅಧ್ಯಕ್ಷರು.— ಗೈರುಹಾಜರಾಗಲು ಶ್ರೀ ಆರ್.ಟಿ. ದೇಸಾಯರಿಗೆ ಅನುಮತಿ ನೀಡಲಾಗಿದೆ.

ಶ್ರೀ ಎಸ್. ಬಂಗಾಪ್ಪ.—ಮಾನ್ಯ ಸಭಾಧ್ಯಕ್ಷರೇ,

ಅಧ್ಯಕ್ಷರು.—ಯಾವ ವಿಷಯದ ಬಗ್ಗೆ ಹೇಳಿ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ಅದನ್ನು ಅಲೋ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಯಾವ ವಿಷಯವನ್ನು ಅಲೋ ಮಾಡುವುದಕ್ಕೆ ಬರುವುದಿಲ್ಲ ಹೇಳಿ ?

ಅಧ್ಯಕ್ಷರು.—ನೀವು ಕೈಲಿ ಹಿಡಿದಿರೋ ಪೇಪರಿನ ವಿಷಯ ಹೇಳುತ್ತೀರಾ ಎಂದು ಕಾಣುತ್ತದೆ.

ಶ್ರೀ ಎಸ್. ಬಂಗಾರಪ್ಪ —ಹೌದು, ನನ್ನ ಕೈಲಿ ಪೇಪರಿದೆ. ಒಂದೊಂದು ಸಲ ಪೇಪರಿನ ವಿಷಯವನ್ನು ಪ್ರಸ್ತಾಪ ಮಾಡಬೇಕಾಗುತ್ತದೆ. ಕ್ಷಮಿಸಿ, ಅಧ್ಯಕ್ಷರೇ, ನಾನು ಮೊದಲೇ ನೋಟಿಸ್ ಕಳುಹಿಸಲಿಕ್ಕಾಗಲಿಲ್ಲ. ಆದರೂ ಈ ವಿಷಯವು ಎಲ್ಲಾ ಪಕ್ಷಗಳಿಗೂ ಸಂಬಂಧಪಟ್ಟ ವಿಚಾರವಾಗಿರುವುದರಿಂದ ಪ್ರಸ್ತಾಪ ಮಾಡಬೇಕಾಗಿದೆ.

ಅಧ್ಯಕ್ಷರು.—ತಾವು ಯಾವುದರ ಬಗ್ಗೆ ಮಾತನಾಡುತ್ತಿದ್ದೀರಿ, ಹೇಳಿ ?

ಶ್ರೀ ರಾಜವರ್ಧನ್.—ಸ್ವಾಮಿ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ.

(ಗೊಂದಲ)

ಅಧ್ಯಕ್ಷರು.—ಇಲ್ಲಿ ಎಲ್ಲರೂ ಕೇಳಿ ? ನಿಮಗೆ ಅವರು ಹೇಳಲಿ, ಅವರಿಗೆ ನೀವು ಹೇಳಿ. ಮಧ್ಯೆ ನಾನು ಸುಮ್ಮನೆ ಕುಳಿತುಕೊಳ್ಳುತ್ತೇನೆ. ನೋಟಿಸ್ ಕೊಡದೆಯೇ ಯಾವ ವಿಷಯವನ್ನೂ ಎತ್ತುವುದಕ್ಕೆ ಬರುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನೋಟಿಸ್ ಕೊಟ್ಟು ಎತ್ತಬೇಕಾಗಿತ್ತೆನ್ನುವ ಮಾತನ್ನು ನಾನು ಆಗಲೇ ಹೇಳಿದ್ದೇನೆ.

ಅಧ್ಯಕ್ಷರು.—ಮಾನ್ಯ ರಾಜವರ್ಧನರು ಏನೋ ಕ್ರಿಯಾಲೋಪ ಎತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ನಮ್ಮದೂ ಕ್ರಿಯಾಲೋಪವಾಗಿದೆಯೆಂದೇ ಇರಬೇಕು.

(ಗೊಂದಲ)

ಶ್ರೀ ರಾಜವರ್ಧನ್.—ಮಾನ್ಯ ಸದಸ್ಯರಂಗಳು ನೋಟಿಸ್ ಕೊಡದೆ ಯಾವ ವಿಷಯವನ್ನೂ ಸಭೆಯಲ್ಲಿ ಎತ್ತಬಾರದೆಂದು ನನ್ನ ಅಭಿಪ್ರಾಯ.

ಶ್ರೀ ಜಿ. ನಾರಾಯಣ ಕುಮಾರ್.—ಅಧ್ಯಕ್ಷರೇ, ನಿಮ್ಮ ಒಳ್ಳೆಯತನವನ್ನು ಅವರು ದುರುಪಯೋಗಪಡಿಸಿಕೊಳ್ಳುವುದಕ್ಕೆ ಅವಕಾಶ ಕೊಡಬೇಡಿ.

ಶ್ರೀ ಎಸ್. ಬಂಗಾರಪ್ಪ.—ವಿಷಯದ ಪ್ರಾಮುಖ್ಯತೆಯನ್ನು ನುಸರಿಸಿ ತಮ್ಮ ಒಪ್ಪಿಗೆ ಪಡೆದು ಸಾರ್ವಜನಿಕರ ಹಿತದೃಷ್ಟಿಯಿಂದ ನಾನು ಮಾತನಾಡುತ್ತಿದ್ದೇನೆ.

ಅಧ್ಯಕ್ಷರು.—ತಾವು ಯಾವ ರೂಲ್ ಪ್ರಕಾರ ಇದಕ್ಕೆ ಅನುಮತಿ ಕೊಡಬೇಕು ಹೇಳಿ ?

ಶ್ರೀ ಎಸ್. ಬಂಗಾರಪ್ಪ.—೫೩ ಇದೆ, ೧೭೨ ಇದೆ. ಕೆಲವು ಸಂದರ್ಭಗಳಲ್ಲಿ ರೂಲ್ಸನ್ನು ಮೀರಿ ಹೋಗುವ ಫುಲ್ ಅಧಿಕಾರ ತಮಗಿದೆ. ಆ ಅಧಿಕಾರವನ್ನು ಇಂದು ಚಲಾವಣೆ ಮಾಡಿ ನಮಗೆ ಮಾತನಾಡಲು ಅವಕಾಶ ಕೊಡಬೇಕು. ಇದರಲ್ಲಿ ಪಕ್ಷದ ಪ್ರಶ್ನೆ ಇಲ್ಲ.

ಅಧ್ಯಕ್ಷರು.—ಆಗಿದ್ದರೆ ಬರೆದುಕಳಿಸಿ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಇವತ್ತಿನ ದಿವಸಕ್ಕೆ ನೀವು ಹೇಳಿದ್ದು ಅನ್ವಯಿಸುವುದಾದರೆ ನಿನ್ನೆಯದು ಏನಾಯಿತು ? ನಾಳೆ ಹೇಗೋ ಗೊತ್ತಿಲ್ಲ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಅಧ್ಯಕ್ಷರೇ ಇವೊತ್ತಿನ ವೇಳಾ ಪಟ್ಟಿ ಏನು ಎನ್ನುವುದನ್ನು ನೀವು ನಮಗೆ ತಿಳಿಸಿಯೇ ಇಲ್ಲವಲ್ಲ ?

ಅಧ್ಯಕ್ಷರು.—ಹೇಳುತ್ತೇನೆ, ಕೇಳಿ ಇವೊತ್ತು ಮೂರು ಗಂಟೆಗೆ ಮತ್ತೆ ಬಿ.ಎ.ಸಿ. ಮೀಟಿಂಗ್ ಇಟ್ಟುಕೊಂಡಿದ್ದೇನೆ. ನಂತರ ತಿಳಿಸುತ್ತೇನೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ನಿನ್ನೆ ಮೀಟಿಂಗ್‌ನಲ್ಲಿ ತೀರ್ಮಾನವಾದದ್ದು ಏನು ? ಅದನ್ನು ಎಲ್ಲಿ ಹೇಳಿದ್ದಿರಿ ? ಅದಕ್ಕೇ ನಾನು ಹೇಳುತ್ತಿರುವುದು. ಇದು ಎಲ್ಲರಿಗೂ ಬೇಕಾದ ವಿಷಯವಾದ್ದರಿಂದ ಸರ್ಕಾರ ಒಪ್ಪಿದೆ, ನಾವೂ ಒಪ್ಪಿದ್ದೇವೆ, ಇದಕ್ಕೆ ತಾವು ಅವಕಾಶ ಕೊಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ಇವೊತ್ತು ಏನು ಹೇಳುತ್ತೀರೆಂದು ಅರ್ಥವಾಗುತ್ತಿಲ್ಲ. ನಿನ್ನೆ ಹೇಳಿದಂಥ ಸ್ಥಿತಿ ಏನಿತ್ತು ?

ಅಧ್ಯಕ್ಷರು.—ಇನ್ನೊಮ್ಮೆ ರಿವ್ಯೂ ಮಾಡೋಣ ಎಂದಿದ್ದೆ.

ಶ್ರೀ ಎಸ್. ಬಂಗಾರಪ್ಪ.—ರಿವ್ಯೂ ಮಾಡುವ ಅವಶ್ಯಕತೆ ಏನಿತ್ತು ? ಇವತ್ತಿನ ಮೀಟಿಂಗ್ ಸೇರುವುದಕ್ಕೆ ಮುಂಚೆ ನಮಗೆ ತೀರ್ಮಾನ ಏನಾಗಿದೆ ಎಂದು ತಾವು ತಿಳಿಸಬೇಕು. ಈಗೇನಾಗಿದೆ ಎಂದರೆ ನಿನ್ನೆ ಆದ ತೀರ್ಮಾನಕ್ಕೆ ಐದು ಪೈಸೆ ಬೆಲೆ ಇಲ್ಲವೇ ? ಅವರು ಒಪ್ಪದಿದ್ದರೆ ನೀವೂ ಒಪ್ಪುವುದಿಲ್ಲವೇ ? ರೂಲ್ಸ್ ಏಕೆ ಇರಬೇಕು ? ಬಿ.ಎ.ಸಿ. ಏಕೆ ಬೇಕು ? ಒಬ್ಬೊಬ್ಬರಿಗೊಂದು ಬೇರೆಯವರಿಗೆ ಇನ್ನೊಂದು ಮಾಡುತ್ತಿದ್ದೀರಾ ?

ಅಧ್ಯಕ್ಷರು.—ನಾನು ಹೇಳುವುದೇನೆಂದರೆ, ಎಂ.ಎಸ್. ಕೃಷ್ಣನ್ ಇದ್ದಾರೆ, ಮುಖ್ಯಮಂತ್ರಿ ಇದ್ದಾರೆ, ನಿಮ್ಮನ್ನೂ ಕೇಳಬೇಕೆಂದು ಇದ್ದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ನಾವು ಇಲ್ಲಿಯವರೆಗೆ ಹಾಕಿಕೊಂಡು ಬಂದಂಥ ಒಂದು ಪರಂಪರೆ ಏನಿದೆ. ಅದನ್ನು ಕೈಬಿಟ್ಟು ಹೊಸಹೊಸ ಸಂಪ್ರದಾಯಗಳನ್ನು ಹಾಕಿಕೊಂಡ ಹೋಗುತ್ತಿದ್ದೇವೆ ಎಂದು ಹೇಳಬೇಕಾಗಿದೆ. ಇಲ್ಲದಿದ್ದರೆ ತಾವು ನಿನ್ನೆಯ ದಿನ ಬಿಸ್‌ನೆಸ್ ಅಡ್ವೈಜರಿ ಕಮಿಟಿಯಲ್ಲಿ ಆದಂಥ ತೀರ್ಮಾನವನ್ನು ಇಲ್ಲಿ ಪ್ರಕಟಣೆ ಮಾಡಬೇಕಾಗಿತ್ತು. ಆದರೆ ಆ ರೀತಿ ಮಾಡದಿರಲು ಕಾರಣವೇನು ? ಒಂದು ವೇಳೆ ನಿನ್ನೆ ಅಲ್ಲಿ ತೆಗೆದುಕೊಂಡ ತೀರ್ಮಾನವನ್ನು ಬದಲಾವಣೆ ಮಾಡುವುದಿದ್ದರೆ, ಆದನ್ನಾದರೂ ತಾವು ನಿನ್ನೆಯ ದಿವಸ ಹೇಳಬಹುದಾಗಿತ್ತು. ಆದರೆ ಅದನ್ನೂ ಸಹ ತಾವು ಮಾಡಲಿಲ್ಲ. ಇಲ್ಲಿ ತಮ್ಮ ಒಂದು ಹಕ್ಕಿನ ಬಗ್ಗೆ ನಾನು ಪ್ರಶ್ನೆ ಮಾಡುತ್ತಿಲ್ಲ. ಇವೊತ್ತಿನ ಕಾರ್ಯಕ್ರಮವೇನು ಎಂಬುದನ್ನು ನಿನ್ನೆಯ ದಿವಸ ತಾವು ಪ್ರಕಟ ಮಾಡದ ಕಾರಣದಿಂದ ಈ ದಿನ ಪೂರ್ತಿ ಶೂನ್ಯವೇಳೆ ಎಂದು ನಮ್ಮ ಭಾವನೆ. ಇದೇ ಕಾರಣದಿಂದ ಮಾನ್ಯ ವಿರೋಧಪಕ್ಷದ ನಾಯಕರು ತಮಗೆ ನೋಟೀಸ್ ಕೊಡದೆ ಒಂದು ವಿಚಾರವನ್ನು ಪ್ರಸ್ತಾಪ ಮಾಡಲು ಎದ್ದಿನಿಂತರು.

ಅಧ್ಯಕ್ಷರು.—ಈ ದಿನ ಮತ್ತೆ ೩ ಗಂಟೆಗೆ ಬಿಸ್‌ನೆಸ್ ಅಡ್ವೈಜರಿ ಕಮಿಟಿ ಮೀಟಿಂಗ್ ಕರೆದಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ನಿನ್ನೆಯ ದಿವಸ ನಾವೆಲ್ಲರೂ ಸೇರಿ ಒಂದು ತೀರ್ಮಾನಕ್ಕೆ ಬಂದ ಮೇಲೆ ಅದನ್ನು ತಾವು ಇಲ್ಲಿ ಪ್ರಕಟ ಮಾಡಬೇಕಾಗಿತ್ತು. ಆದರೆ ಅದನ್ನು ತಾವು ಏತಕ್ಕೆ ಪ್ರಕಟಣೆ ಮಾಡಲಿಲ್ಲ ?

ಅಧ್ಯಕ್ಷರು.—ಈ ದಿನ ಮತ್ತೆ ಮೀಟಿಂಗ್ ಕರೆಯಬೇಕೆಂಬ ಉದ್ದೇಶದಿಂದ ನಿನ್ನೆಯ ದಿವಸದ ತೀರ್ಮಾನವನ್ನು ಪ್ರಕಟಣೆ ಮಾಡಲಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಒಂದು ಸಲ ತೀರ್ಮಾನವಾದ ಮೇಲೆ ಮತ್ತೆ ಮೀಟಿಂಗ್ ಕರೆಯುವ ಅವಶ್ಯಕತೆ ಏನಿದೆ ?

ಅಧ್ಯಕ್ಷರು.—ಈ ದಿನ ೩ ಗಂಟೆಗೆ ಮತ್ತೆ ಮೀಟಿಂಗ್ ಕರೆದಿದ್ದೇನೆ. ಆಗ ತಮಗೆ ಎಲ್ಲವನ್ನೂ ಹೇಳುತ್ತೇನೆ. ನಿನ್ನೆಯ ತೀರ್ಮಾನದ ಬಗ್ಗೆ ಮುಖ್ಯಮಂತ್ರಿಗಳ ಅಭಿಪ್ರಾಯ ಏನಿದೆ ಎಂಬುದನ್ನು ಸಹ ತಿಳಿದುಕೊಳ್ಳಬೇಕಾಗಿದೆ.

ಶ್ರೀ ಎಸ್. ಬಂಗಾರಪ್ಪ.—ಹಾಗಿದ್ದರೆ, ವೀರೆಯವರು ಇದೇ ಅಭಿಪ್ರಾಯವನ್ನು ಮಕ್ಕಳವಡಿಸಿದರೆ, ತಾವು ಮತ್ತೆ ಮೀಟಿಂಗ್ ಕರೆಯುತ್ತಿರಾ ?

ಅಧ್ಯಕ್ಷರು.—ನಾನು ಎರಡು ಕಡೆಯವರ ಅಭಿಪ್ರಾಯವನ್ನು ಸಹ ತೆಗೆದುಕೊಳ್ಳಬೇಕಾಗುತ್ತದೆ. ನಿನ್ನೆಯ ದಿವಸ ನಾವು ಒಂದು ತೀರ್ಮಾನ ತೆಗೆದುಕೊಳ್ಳುವ ಮಧ್ಯದಲ್ಲಿ ಮಾನ್ಯ ಸಭಾನಾಯಕರು ಇರಲಿಲ್ಲ. ಅವರು ಮಧ್ಯದಲ್ಲಿ ಎದ್ದುಹೋದರು. ಆದ್ದರಿಂದ ನಾನು ಅವರ ಅಭಿಪ್ರಾಯವನ್ನು ಸಹ ತಿಳಿದುಕೊಳ್ಳಬೇಕಾಗಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಬಿಸ್‌ನೆಸ್ ಅಡ್ವೈಜರಿ ಕಮಿಟಿಯಲ್ಲಿ ತೆಗೆದುಕೊಂಡ ತೀರ್ಮಾನವನ್ನು ಪುನರ್ಪರಿಶೀಲೆ ಮಾಡುವಂತಹ ಅಧಿಕಾರ ತಮಗಿದೆ. ಇದೇ ಕಾರಣದಿಂದ ಈ ದಿನ ಮಧ್ಯಾಹ್ನ ೩ ಗಂಟೆಗೆ ನೀವು ಏಕಾ ಏಕಿ ಮೀಟಿಂಗ್ ಕರೆಯುವುದಕ್ಕೆ ಮೊದಲು ವಿರೋಧ ಪಕ್ಷದ ನಾಯಕರನ್ನು ಸಹ ನೀವು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗಿತ್ತು. ಈ ಬಗ್ಗೆ ನೀವು ಅವರ ಜೊತೆಗೆ ಚರ್ಚೆ ಮಾಡಬಹುದಾಗಿತ್ತು. ಆದರೆ ಆ ಕೆಲಸವನ್ನು ತಾವು ಮಾಡದೆ ಈಗ ವಿರೋಧ ಪಕ್ಷದ ನಾಯಕರ ಮಾತಿಗೆ ಅಡ್ಡಿ ಮಾಡುವುದು ಸರಿಯಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಿನ್ನೆಯ ದಿವಸ ಬಿಸ್‌ನೆಸ್ ಅಡ್ವೈಜರಿ ಕಮಿಟಿಯಲ್ಲಿ ತೆಗೆದುಕೊಂಡ ತೀರ್ಮಾನವನ್ನು ಬದಿಗಿಟ್ಟು ಇವೊತ್ತಿನ ಮೀಟಿಂಗ್‌ನಲ್ಲಿ ಅದನ್ನು ಬದಲಾವಣೆ ಮಾಡಬೇಕಾಗಿದೆ ಎಂದು ತಾವು ಹೇಳುತ್ತಿರುವುದು ಸರಿಯಲ್ಲ.

ಅಧ್ಯಕ್ಷರು.—ಎಲ್ಲರ ಅಭಿಪ್ರಾಯವನ್ನೂ ಕೇಳೋಣ ಎಂದು ನಾನು ಮೀಟಿಂಗ್ ಕರೆದಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ನಿನ್ನೆಯ ದಿವಸ ನಡೆದ ಮೀಟಿಂಗ್‌ನಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ಸದಸ್ಯರು ಇದ್ದರು. ಎಲ್ಲರೂ ಸೇರಿ ಸರ್ವಾನುಮತದಿಂದ ತೆಗೆದುಕೊಂಡ ತೀರ್ಮಾನವನ್ನು ಸರ್ಕಾರ ಒಪ್ಪಿಲ್ಲ ಎಂದು ಮತ್ತೆ ಮೀಟಿಂಗ್ ಕರೆಯುವುದು ಸರಿಯೇ ?

ಅಧ್ಯಕ್ಷರು.—ಅದನ್ನು ಬಿಸ್‌ನೆಸ್ ಅಡ್ವೈಜರಿ ಕಮಿಟಿಯೇ ತೀರ್ಮಾನ ಮಾಡಲಿ ಎಂದು ಈ ದಿನ ಮಧ್ಯಾಹ್ನ ಮೂರು ಗಂಟೆಗೆ ಸಭೆ ಕರೆದಿದ್ದೇನೆ.

ಶ್ರೀ ಎಸ್. ಬಂಗಾರಪ್ಪ —ಇದು ನಮ್ಮ ಹಕ್ಕಿನ ಪ್ರಶ್ನೆ. ತಾವು ಒಮ್ಮೆ ಸಭೆ ಕರೆದಾಗ ಆ ಸಭೆಗೆ ಸಂಬಂಧಪಟ್ಟವರು ಹಾಜರಾಗುವುದು ಆಥವಾ ಬಿಡುವುದು ಬೇರೆ ಪ್ರಶ್ನೆ. ಆದರೆ ಅಲ್ಲಿ ಸರ್ವಾನುಮತದಿಂದ ಏನು ಒಂದು ತೀರ್ಮಾನವನ್ನು ತೆಗೆದುಕೊಳ್ಳಲಾಗುತ್ತದೆ, ಅದನ್ನು ಇಲ್ಲಿ ತಾವು ಪ್ರಕಟ ಮಾಡದೆ ತಡೆಹಿಡಿಯುವುದು ಈ ನಮ್ಮ ಸಭಾ ನಡವಳಿಯ ಪ್ರಕಾರ ಸರಿಯಲ್ಲ.

ಅಧ್ಯಕ್ಷರು.—ನಾನು ೩ ಗಂಟೆಗೆ ವೀಂಟಿಂಗ್ ಕರೆದಿದ್ದೇನೆ. ಅಲ್ಲಿ ತಪ್ಪಿಗೆ ಎಲ್ಲಾ ವಿವರಗಳನ್ನು ಕೊಡುತ್ತೇನೆ. ಆಲ್ಲಿ ತಪ್ಪು ಅಭಿಪ್ರಾಯವನ್ನು ನಾನು ಕೇಳಬೇಕಾಗುತ್ತದೆ ಮತ್ತು ಸಭಾನಾಯಕರ ಅಭಿಪ್ರಾಯವನ್ನೂ ಸಹ ನಾನೂ ಕೇಳಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ನಿನ್ನೆಯ ದಿವಸ ನಡೆದ ಮೀಟಿಂಗ್ ಬಗ್ಗೆ ನಮಗೆ ಮೊದಲೇ ತಿಳಿಸಿದಂತೆ ಈ ದಿನದ ಮೀಟಿಂಗ್ ಬಗ್ಗೆಯೂ ಸಹ ಮೊದಲೇ ನಮಗೆ ಏತಕ್ಕೆ ತಾವು ತಿಳಿಸಲಿಲ್ಲ ? ನಿನ್ನೆಯ ದಿವಸ ಸರ್ವಾನುಮತದಿಂದ ತೆಗೆದುಕೊಂಡ ತೀರ್ಮಾನವನ್ನು ತಾವು ಇಲ್ಲಿ ಏತಕ್ಕೆ ಪ್ರಕಟಣೆ ಮಾಡಲಿಲ್ಲ ?

ಅಧ್ಯಕ್ಷರು.—ಇರಲಿ

ಶ್ರೀ ಎಸ್. ಬಂಗಾರಪ್ಪ.—ಇರಲಿ ಎಂದರೆ ಏನು ?

ಅಧ್ಯಕ್ಷರು.—ನಿನ್ನೆಯ ದಿವಸ ಮುಖ್ಯಮಂತ್ರಿಗಳು ಮೀಟಿಂಗ್ ಮುಗಿಯುವವರೆಗೆ ಇರಲಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಅವರು ಇರದಿದ್ದರೂ ಸಹ ಅವರ ಪರವಾಗಿ ಶ್ರೀ ಲಕ್ಷ್ಮೀಸಾಗರ್ ಅವರು ಮತ್ತು ಶ್ರೀ ಬೊಮ್ಮಾಯಿ ಅವರು ಇದ್ದರು.

ಶ್ರೀ ಜಿ. ನಾರಾಯಣಕಂಪಾರ್.—ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ನಾಯಕರು ಯಾವ ನಿಯಮದ ಪ್ರಕಾರ ಇದನ್ನೆಲ್ಲಾ ಪ್ರಸ್ತಾಪ ಮಾಡುತ್ತಿದ್ದಾರೆ ?

(ಗೊಂದಲ)

ಅಧ್ಯಕ್ಷರು.—ಮೀಟಿಂಗ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸಹ ಇದ್ದರೆ ಒಳ್ಳೆಯದೆಂದು ಈ ದಿನ ಮತ್ತೆ ಮೀಟಿಂಗ್ ಕರೆದಿದ್ದೇನೆ.

ಶ್ರೀ ಎಸ್.ಬಂಗಾರಪ್ಪ.—ನಿನ್ನೆಯ ದಿವಸದ ಮೀಟಿಂಗ್‌ನಲ್ಲಿ ಶ್ರೀ ಬೊಮ್ಮಾಯಿ ಅವರಿದ್ದರು ಶ್ರೀ ಲಕ್ಷ್ಮೀಸಾಗರ್ ಅವರು ಇದ್ದರು, ಸರ್ಕಾರದ ಮುಖ್ಯ ಸಚೇತಕರು ಇದ್ದರು. ಮುಖ್ಯ ಮಂತ್ರಿಗಳು ತಮ್ಮ ಜವಾಬ್ದಾರಿಯನ್ನು ಬೇರೆ ಮಂತ್ರಿಗಳಿಗೆ ವಹಿಸಿ ಹೋಗಿದ್ದರು. ಈ ಕಾರಣದಿಂದ ನಾವು ಸರ್ವಾನುಮತದಿಂದ ತೆಗೆದುಕೊಂಡ ತೀರ್ಮಾನಕ್ಕೆ ಮುಖ್ಯ ಮಂತ್ರಿಗಳ ಒಪ್ಪಿಗೆ ಸಿಕ್ಕಿಲ್ಲವೆಂಬ ಪ್ರಶ್ನೆ ಉದ್ಭವವಾಗುವುದಿಲ್ಲ.

ಅಧ್ಯಕ್ಷರು.—ನಿನ್ನೆಯ ತೀರ್ಮಾನದ ಬಗ್ಗೆ ಮುಖ್ಯ ಮಂತ್ರಿಗಳನ್ನು ಮತ್ತೊಮ್ಮೆ ಕೇಳೋಣವೆಂದಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಮುಖ್ಯ ಮಂತ್ರಿಗಳಿಗೋಸ್ಕರವಾಗಿ ನಿನ್ನೆಯ ತೀರ್ಮಾನವನ್ನು ತಡೆಹಿಡಿಯುವುದಕ್ಕಾಗುವುದಿಲ್ಲ. ಮಾನ್ಯ ಮಂತ್ರಿಗಳಿಗೆ ಆ ಒಂದು ಅಧಿಕಾರ ಇಲ್ಲ. ಅವರಿಗೋಸ್ಕರವಾಗಿ ನಿನ್ನೆಯ ತೀರ್ಮಾನವನ್ನು ತಡೆಹಿಯುವುದು ಈ ಸದನದ ಸತ್ಯಸಾಪ್ರದಾಯಕ್ಕೆ ವಿರುದ್ಧವಾಗುತ್ತದೆ. ನಿನ್ನೆ ಬಿಸ್‌ನೆಸ್ ಅಡ್ವೈಜರಿ ಕಮಿಟಿಯಲ್ಲಿ ತೆಗೆದುಕೊಂಡ ತೀರ್ಮಾನದ ಬಗ್ಗೆ ಈ ಮನೆಯ ಸಭಾನಾಯಕರು ಇಂಟರ್‌ಫಿಯರ್ ಆದರೆ ಮತ್ತು ಅವರಿಗೋಸ್ಕರವಾಗಿ ನಿನ್ನೆಯ ತೀರ್ಮಾನಗಳನ್ನು ತಡೆಹಿಡಿದರೆ, ಅದನ್ನು ನಾವು ಬಹಳ ಗಂಭೀರವಾಗಿ ಕನ್ಸಿಡರ್ ಮಾಡಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಇದನ್ನು ಪ್ರಿವಿಲೇಜ್ ಮ್ಯಾಟರ್ ಆಗಿ ತೆಗೆದುಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳನ್ನು ಮುತ್ತೊನ್ನೆ ಕೇಳೋಣ ಎಂದು ಈ ದಿನ ಮಧ್ಯಾಹ್ನ ಮೂರು ಗಂಟೆಗೆ ಮೀಟಿಂಗ್ ಕರೆದಿದ್ದೇನೆ. ಆದನ್ನು ತಮಗೆ ತಿಳಿಸಿದ್ದೇನೆ. ಅಲ್ಲಿ ಏನು ತೀರ್ಮಾನ ವಾಗುತ್ತದೆಯೋ ನೋಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೇ, ನಿಯಮ ೨೪೧ರಲ್ಲಿ ಈ ಬಗ್ಗೆ ಏನು ಹೇಳಿದೇ ಎಂದರೆ:—"ಸಭಾ ನಾಯಕರೊಡನೆ ಸಮಾಲೋಚಿಸಿ, ಸಮಿತಿಗೆ ಉಲ್ಲೇಖಿಸಬೇಕೆಂದು ಅಧ್ಯಕ್ಷರು ನಿರ್ದೇಶನ ನೀಡಬಹುದಾದ ಸರ್ಕಾರಿ ವಿಧೇಯಕಗಳ ಮತ್ತು ಇತರ ಕಾರ್ಯಕಲಾಪಗಳ ಹಂತ ಅಥವಾ ಹಂತಗಳನ್ನು ಕುರಿತು ಚರ್ಚಿಸುವುದಕ್ಕಾಗಿ ಕಾಲಾವಧಿಯ ಹಂಚಿಕೆಗೆ ಶಿಫಾರಸು ಮಾಡುವುದು ಸಮಿತಿಯ ಕರ್ತವ್ಯವಾಗಿರತಕ್ಕದ್ದು... ಆದ್ದರಿಂದ ಇಲ್ಲಿ ಕಮಿಟಿ ಸಂಪ್ರೀಂ ಹೊರತು ಸಭಾನಾಯಕರು ಸುಪ್ರೀಂ ಆಗುವುದಿಲ್ಲ.

ಅಧ್ಯಕ್ಷರು.—ಅದಕ್ಕಾಗಿಯೇ ಇವೊತ್ತು ೩ ಗಂಟೆಗೆ ಮೀಟಿಂಗ್ ಕರೆದಿದ್ದೇನೆ.

ಇಬ್ಬರೂ ನಾಯಕರ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕಾಗುತ್ತದೆ. ವಿರೋಧ ಪಕ್ಷದವರೂ ಹೇಳಿ ಬರೂ ಗಣನೆಗೆ ತೆಗೆದುಕೊಳ್ಳಬೇಕು. ಸಭಾನಾಯಕರು ಹೇಳಿದರು ಗಣನೆಗೆ ತೆಗೆದುಕೊಳ್ಳಬೇಕು. ಮೂರು ಗಂಟೆಗೆ ಸದನದ ಕಾರ್ಯಕಲಾಪದ ಸಮಿತಿಯ ಸಭೆಯನ್ನು ಕರೆದಿದ್ದೇವೆ, ನೀವು ನಿನ್ನೆ ಮಾಡಿದ ತೀರ್ಮಾನವೇ ಅಂತಿಮವಾದುದು. ಇದಕ್ಕೆ ಯಾವ ತಕರಾರೂ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಮುಖ್ಯ ಮಂತ್ರಿಗಳು ಒತ್ತಾಯ ಮಾಡಿದ ಮೇಲೆ ತಾವು ಅಜೆಂಡ ತಂದು ಇಲ್ಲಿ ಇಡಲಿಲ್ಲ ಎಂತು ಪ್ರಕಟಣೆ ಮಾಡಲಿಲ್ಲ ಎನ್ನುವುದೇ ನಮ್ಮ ಪ್ರಶ್ನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ ೨೮ರ ಮತ್ತು ೨೪ಕ್ಕೆ ತಮ್ಮ ಗಮನವನ್ನು ಸೆಳೆದಿದ್ದಾರೆ. ರೂಲ್ಸ್ ಆಫ್ ಪ್ರೊಸಿಜರ್ ೨೮ನ್ನು ನೋಡಿದರೆ On days allotted for the transaction of Government business such business shall have precedence and the Secretary shall arrange that business in such order as the Speaker may, in consultation with the Leader of the House determine.

Provided that such order of business shall not be varied on the day that business is set down for disposal unless the Speaker is satisfied that there is sufficient ground for such variation.

Now, according to Rule 142,

(1) It shall be the function of the Committee to recommend the time that should be allocated for the discussion of the stage or stages of such Government Bills and other business as the Speaker, in consultation with the Leader of the House, may direct for being referred to the Committee.

(2) The Committee shall have the power to indicate in the proposed time table the different hours at which the various stage of the Bill or other business shall be completed.

(3) The Committee shall have such other functions as may be assigned to it by the Speaker from time to time. ಈಗ ಏನಾಗಿದೆಯೆಂದರೆ ನಿನ್ನೆಯ ದಿವಸ ನಾವು ಸೇರಿದಾಗ ಈ ಎಲ್ಲವೂ ಕೂಡ ತೀರ್ಮಾನವಾಗಿತ್ತು. ನಿನ್ನೆಯ ದಿವಸ ಸಭಾ ನಾಯಕರು ಮತ್ತು ವಿರೋಧಪಕ್ಷದ ನಾಯಕರು ಕೂಡ ಸಭೆಯಲ್ಲಿ ಹಾಜರಿದ್ದರು. ನಾವು ಎಲ್ಲಾರೂ ಆಲ್ಲಿದ್ದೆವು. ಅಲ್ಲಿ ತಾವು ಚರ್ಚೆ ಮಾಡಿದ ಮೇಲೆ ಒಂದು ತೀರ್ಮಾನಕ್ಕೆ ಬಂದಿರಿ. ಈ ವಿಷಯವನ್ನು ಚರ್ಚೆ ಮಾಡುವಾಗ ಸಭಾನಾಯಕರು ಹೇಳಿದರು, ನಾನು ಈಗ ಇರುವುದಕ್ಕೆ ಆಗುವುದಿಲ್ಲ, ನಾನು ಇಲ್ಲದೆ

ಇದ್ದರೂ ಪರವಾಗಿಲ್ಲವೆಂದು ಹೇಳಿದರು. ನಾವು ಸಭಾ ಅವರು ಇರಲಿಕ್ಕೆ ಸಾಧ್ಯವಿಲ್ಲ ಎಂಬುದನ್ನು ತಿಳಿದುಕೊಂಡಿದ್ದರೆ ಒಳ್ಳೆಯದಾಗುತ್ತಿತ್ತು. ನಾನು ಎರಡು ಮೂರು ಸಲ ಅವರನ್ನು ಕೇಳಿದೆ. ವ್ಯಯಕ್ತಿಕ ಸಮಸ್ಯೆ ಇರುವುದರಿಂದ ನಾನು ಇರಲಿಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳಿದರು. ಸರಿ, ನಾವೇ ನಡಸಿಕೊಂಡು ಹೋಗುತ್ತೇವೆಂದು ಒಪ್ಪಿಕೊಂಡು ಹೋದ ಮೇಲೆ, ಎಲ್ಲವೂ ತೀರ್ಮಾನವಾದ ಮೇಲೆ ಮತ್ತು ಚರ್ಚೆಯಾದ ಮೇಲೆ, ರೂಲ್ಸ್ ಆಫ್ ಪ್ರೊಸಿಜರ್ ಪ್ರಕಾರ ಮುಂದಿನ ಜವಾಬ್ದಾರಿ ತಮ್ಮ ಮೇಲೆ ಇತ್ತು. ತಾವು ನಿನ್ನೆ ಇದರ ಬಗ್ಗೆ ಪ್ರಕಟಣೆ ಮಾಡಬೇಕಾಗಿತ್ತು. ನೀವು ಪ್ರಕಟಣೆ ಮಾಡದೆ ಇರುವುದರಿಂದ ನಮಗೆ ಈಗ ಅನುಮಾನ ಉಂಟಾಗಿದೆ.

ಅಧ್ಯಕ್ಷರು.—ಪ್ರಕಟಣೆ ಮಾಡುವುದಕ್ಕೆ ಮುಂಚೆ ಮತ್ತೊಮ್ಮೆ ತಮ್ಮ ಅಭಿಪ್ರಾಯವನ್ನು ಕೇಳ ಬೇಕೆಂದು ಪ್ರಕಟಣೆ ಮಾಡಲಿಲ್ಲ

ಶ್ರೀ ಎಂ. ಎಸ್. ಕೃಷ್ಣನ್.— ಅಂದು ಆದ ತೀರ್ಮಾನವನ್ನು ಪ್ರಕಟಣೆ ಮಾಡದೆಯಿರುವುದರಿಂದ ನಮಗೆ ಅನುಮಾನಪಡುವುದಕ್ಕೆ ಆಸ್ಪದವಾಗುತ್ತದೆ. ಇಲ್ಲಿ ವ್ಯಾರಿಯೇಷನ್ ಮಾಡುವುದಕ್ಕೆ ಅವಕಾಶವಿದೆ ತಾವು ವ್ಯಾರಿಯೇಷನ್ ಮಾಡುತ್ತಾ ಇದ್ದೀರಿ ಎನ್ನುವ ಅಭಿಪ್ರಾಯಕ್ಕೆ ಅವಕಾಶವಿದೆ. ತಮಗೆ ವ್ಯಾರಿಯೇಷನ್ ಮಾಡುವುದಕ್ಕೆ ಅಧಿಕಾರವಿದೆ. ರೂಲ್ಸ್ ಆಫ್ ಪ್ರೊಸಿಜರ್ ಪ್ರಕಾರ ನಿನ್ನೆಯ ದಿವಸ ಆದ ತೀರ್ಮಾನವನ್ನು ತಾವು ಪ್ರಕಟಣೆ ಮಾಡಬೇಕಾಗಿತ್ತು. ಆ ರೀತಿ ಮಾಡದೆ ಪುನ: ನಮ್ಮನ್ನು ಕರೆಯಿಸಿ ವ್ಯಾರಿಯೇಷನ್ ಮಾಡುವುದಕ್ಕೆ ತಮಗೆ ಅಧಿಕಾರವಿದೆ. ಇಲ್ಲಿ ಸ್ವಲ್ಪವಾಟ್ಟಿಗೆ ಚ್ಯುತಿ ಇದ್ದ ಹಾಗೆ ಕಾಣುತ್ತದೆ. ಆದ್ದರಿಂದ ಮತ್ತೆ ನಮ್ಮನ್ನು ಕರೆಯಿಸಿದ್ದೀರಿ ನೀವೇನಾದರೂ ಬದಲಾವಣೆ ಮಾಡು ವುದಕ್ಕೆ ಪ್ರಯತ್ನಪಟ್ಟರೆ ಏನಾಗುತ್ತದೆ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ಇದರಿಂದ ಖಂಡಿತವಾಗಿ ತೊಂದರೆಯಾಗುತ್ತದೆ ಮತ್ತು ತಕರಾರು ಬರುತ್ತದೆ.

ಶ್ರೀ ಎಸ್.ಆರ್. ಬೊಮ್ಮಾಯಿ.— ನಿನ್ನೆಯ ದಿವಸ ನಡೆದಂತಹ ವಿಚಾರವನ್ನು ಹೇಳಿದರು. ಅದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ತಾವು ಈ ಸಭೆಯಲ್ಲಿ ಅದನ್ನು ಪ್ರಕಟಣೆ ಮಾಡುವುದಕ್ಕೂ ಮೊದಲು ಸಭೆಯ ನಾಯಕರು ಈ ಚರ್ಚೆಯಲ್ಲಿ ಇರುವುದು ಒಳ್ಳೆಯದು ಎಂದು ತಿಳಿದು ಹೇಳೋಣ ವೆಂದು ಇದ್ದಿರಿ, ಏಕೆಂದರೆ ಹೆಚ್ಚಾಗಿ ಈ ಆಪಾದನೆ ನೇರವಾಗಿ ಅವರ ಮೇಲೆ ಇರುವುದರಿಂದ, ಚರ್ಚೆ ಮಾಡುವಾಗ ಉತ್ತರ ಕೊಡುವುದಕ್ಕೆ ಅವರು ಇರಬೇಕು ಎನ್ನುವ ಅಭಿಪ್ರಾಯ ವ್ಯಕ್ತಮಾಡಿರುವುದರಿಂದ ಪುನ; ಇದನ್ನು ಆಲೋಚನೆ ಮಾಡೋಣ ಎಂಬ ಸಲಹೆಯನ್ನು ನಾವು ಕೊಟ್ಟಮೇಲೆ ತಾವು ಪುನ: ಈ ಸಭೆಯನ್ನು ಕರೆದಿದ್ದೀರಿ. ಸದನದ ಕಾರ್ಯಕಲಾಪದ ಸಮಿತಿಯ ಸಭೆಯಲ್ಲಿ ಕುಳಿತುಕೊಂಡು ಇದನ್ನು ಇತ್ಯರ್ಥ ಮಾಡೋಣ. ಇಲ್ಲಿ ಹೆಚ್ಚು ಚರ್ಚೆ ಮಾಡುವುದು ಬೇಡ ತಮ್ಮ ಅಧಿಕಾರ ಅಥವಾ ಆ ಕಡೆ ಮಾನ್ಯ ವಿರೋಧಪಕ್ಷದ ಸದಸ್ಯರು ಹೇಳಿದ್ದರಲ್ಲ ಭಿನ್ನಾಭಿಪ್ರಾಯವಿಲ್ಲ. ಅನೇಕ ಸಲ ಭಿನ್ನಾಭಿಪ್ರಾಯ ದಲ್ಲಿ ಬದಲಾವಣೆಯಾಗಬೇಕು. ಹೊಂದಾಣಿಕೆ ಮಾಡಿಕೊಂಡು ಮತ್ತೊಮ್ಮೆ ಪುನರ್ ಆಲೋಚನೆ ಮಾಡುವುದಕ್ಕೆ ತೊಂದರೆಯಾಗುವುದಿಲ್ಲ. ಮೂರು ಗಂಟೆಗೆ ತಾವು ಸಭೆ ಕರೆದಿದ್ದೀರಿ. ಚರ್ಚೆ ಮಾಡಿ ನಾವು ನಿರ್ಣಯ ತೆಗೆದುಕೊಳ್ಳೋಣ. ಇನ್ನು ಇದರ ಬಗ್ಗೆ ಹೆಚ್ಚು ಚರ್ಚೆ ಬೇಡವೆಂದು ಹೇಳುತ್ತೇನೆ.

ಅಧ್ಯಕ್ಷರು.—ಅದನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗ ನಾವು ತಮ್ಮ ಅಧಿಕಾರವನ್ನು ಪ್ರಶ್ನೆ ಮಾಡುತ್ತಾ ಇದ್ದೇವೆ ಎನ್ನುವ ಅಭಿಪ್ರಾಯ ಬರಬಾರದು.

ಅಧ್ಯಕ್ಷರು.—ನನ್ನ ಉದ್ದೇಶ ನಿಮ್ಮ ಅಭಿಪ್ರಾಯವನ್ನು ಕೇಳಿಕೊಂಡು ಮೂರು ಗಂಟೆಗೆ ಆದ ತೀರ್ಮಾನವನ್ನು ಪ್ರಕಟಣೆ ಮಾಡೋಣವೆಂದು ಇದ್ದೆವು ಇದನ್ನು ನಾನು ನಡವಳಿಕೆಯ ನಿಯಮದ ಪ್ರಕಾರ ಒಪ್ಪಿಕೊಂಡಿದೆ ನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇದು ಸಂಪ್ರಾದಾಯದ ಪ್ರಶ್ನೆ, ಏಕೆಂದರೆ ಇಲ್ಲಿ ಸಭಾನಾಯಕರ ಅವಶ್ಯಕತೆ ಇಲ್ಲ. ಸದನದ ಕಾರ್ಯಕಲಾಪದ ಸಮಿತಿಯ ಸಭೆಯು ಮೂರು ಗಂಟೆಗೆ ಇದೆ ಅದು ಆದನಂತರ ಸಭಾನಾಯಕರು ಹೇಳಿದರು, ನಾನು ಇರಬೇಕಾದ ಅವಶ್ಯಕತೆ ಇಲ್ಲದಿದ್ದರೂ ಸಭೆಯನ್ನು ಮಾಡಿರೆಂದು ಅವರು ಒಪ್ಪಿಗೆ ಕೊಟ್ಟರು. ಎಲ್ಲರೂ ಒಪ್ಪಿಕೊಂಡು ಇದು ಸರ್ವಾನುಮತದಿಂದ ನಿರ್ಣಯವಾಯಿತು. ಸರ್ವಾನುಮತದಿಂದ ನಿರ್ಣಯವಾದ ಮೇಲೆ ಮಾನ್ಯ ಎಂ.ಎಸ್. ಕೃಷ್ಣನ್

ರವರು ಹೇಳಿದಂತೆ ನಾವೇನು ನಿರೀಕ್ಷೆ ಮಾಡಿದ್ದೆವು ಎಂದರೆ ನಿನ್ನೆ ಸಂಜೆ ತಾವು ಚರ್ಚೆ ಮಾಡಿದ ಮೇಲೆ ಆದನ್ನು ತಾವು ಸಭೆಯಲ್ಲಿ ಪ್ರಕಟಣೆ ಮಾಡಬೇಕಾಗಿತ್ತು. ಸದನದ ಕಾರ್ಯಕಲಾಪದ ಸಮಿತಿಯು ಸಭೆಯಲ್ಲಿ ಯಾವುದು ನಿರ್ಣಯವಾಯಿತು, ಆ ನಿರ್ಣಯವು ಈ ಸದನದ ನಿರ್ಣಯವೆಂದು ನೀವು ಭಾವಿಸಿಕೊಳ್ಳಬೇಕಾಗಿತ್ತು. ಇವೊತ್ತು ಏನೇನು ಕಾರ್ಯಕ್ರಮ ಆಗಬೇಕು ಎಂಬುದನ್ನು ನಿನ್ನೆ ಸಂಜೆ ತಾವು ನಿರ್ಣಯ ಮಾಡಬೇಕಾಗಿತ್ತು. ನಮ್ಮ ಸೂಕ್ಷ್ಮವಾದ ಆಕ್ಷೇಪಣೆ ಏನೆಂದರೆ ನಿನ್ನೆ ತಾವು ಈ ವರದಿಯನ್ನು ಪ್ರಕಟಣೆ ಮಾಡಬೇಕಾಗಿತ್ತು. ಸಭಾನಾಯಕರು ಈ ವಿಷಯದ ಆದನ್ನೇಲೆ ತಮ್ಮ ಜೊತೆ ಬಂದು ಮಾತನಾಡಿ ನಾನು ಇರಲೇಬೇಕೆಂದು ಈ ಕಾರ್ಯಕಲಾಪದ ಸಮಿತಿಯಲ್ಲಿ ಹೇಳಿದರು ಈ ವರದಿಯನ್ನು ಬದಲಾವಣೆ ಮಾಡಬೇಕೆಂದು ಇದ್ದರೆ, ಕೊನೆಯ ಪಕ್ಷ ಇಲ್ಲಿ ತಾವು ಹೇಳಬೇಕಾಗಿತ್ತು ನೀವು ಈ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗಿತ್ತು.

ಅಧ್ಯಕ್ಷರು.—ನೀವು ಒಪ್ಪಿದ ಮೇಲೆ ಬದಲಾವಣೆ ಮಾಡಬೇಕಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಿನ್ನೆ ಒಂದು ವೇಳೆ ಕಾರ್ಯಕ್ರಮದ ರಿಪೋರ್ಟನ್ನು ತಾವು ಪ್ರಕಟಣೆ ಮಾಡಿದ ಮೇಲೆ ಇವೊತ್ತು ಪುನ: ಮೂರು ಗಂಟೆಗೆ ವಿಷಯಗೆ ಕರೆದಿದ್ದರೆ ಇಷ್ಟೊಂದು ತೀವ್ರವಾದ ಆಕ್ಷೇಪಣೆ ಗಂಭೀರತೆ ಬರುತ್ತಿರಲಿಲ್ಲ. ಏಕೆಂದರೆ ತಮಗೆ ಯಾವಾಗಲೂ ಸದನದ ಕಾರ್ಯಕಲಾಪದ ಸಮಿತಿಯನ್ನು ಕರೆಯುವುದಕ್ಕೆ ಅವಕಾಶವಿದೆ. ಸಾಧಾರಣವಾಗಿ ತಿದ್ದುಪಡಿ ಮಾಡುವುದಕ್ಕೆ ಅವಕಾಶವಿದೆ ನಿನ್ನೆಯ ದಿವಸ the recommendations of yesterday"s meeting the Business Advisory Committee has been kept in abeyance. ಇದನ್ನು ಸಭಾನಾಯಕರು ಇದ್ದಾಗಲೇ ಮಾಡಬೇಕು ಎಂಬ ಅಪ್ಪಣೆ ತಾವು ಕೊಡಿಸಿದ್ದೀರಿ. ಇದು ಇನ್ನೂ ತೀವ್ರವಾದ ಮತ್ತು ಗಂಭೀರವಾದ ವಿಚಾರ The Leader of the House has approached the Speaker to keep the recommendations of the Business Adnisory Committee in abeyace.

ಅಧ್ಯಕ್ಷರು.—ನೋಡಿ, ಆ ತರಹ ಅಲ್ಲ. ಮಾನ್ಯ ಬಂಗಾರಪ್ಪನವರು ಹೇಳಿದರೂ ಪರಿಶೀಲನೆ ಮಾಡಬೇಕಾಗುತ್ತದೆ, ನೀವು ಹೇಳಿದರೂ ಪುನರ್ ಪರಿಶೀಲನೆ ಮಾಡಬೇಕಾಗುತ್ತದೆ. ನಿಮ್ಮಿಬ್ಬರ ಸಹಕಾರ ನಮಗೆ ಬೇಕು.

SRI M. VEERAPPA MOILY.—It may give rise to the Privilege Motion against the Hon ble Chief Minister. ತಾವು ಹೇಳಿಕೆ ಕೊಡುವುದಕ್ಕೆ ಅಪ್ಪಣೆ ಕೊಡಿಸಿದ್ದೀರಿ. ಕೆಲವು ಸಂಪ್ರಾದಾಯಗಳು ಸೂಕ್ಷ್ಮವಾಗಿರಬಹುದು. ವಿಚಾರ ಬಹಳ ಸಣ್ಣದಾಗಿ ಕಂಡಿರಬಹುದು. ಇದು ಮುಂದೆ ನಡೆಯತಕ್ಕ ಅಧಿವೇಶನಗಳ ನಡವಳಿಕೆಯ ಮೇಲೆ ದುಷ್ಪರಿಣಾಮ ಬೀರುತ್ತದೆ. The Business Advisory Committee cannot be taken so lightly. ತಮಗೆ ಎಷ್ಟು ಪಾವಿತ್ರ್ಯತೆ ಇದೆಯೋ ಅಷ್ಟೇ ಪಾವಿತ್ರತೆ ಸದನದ ಕಾರ್ಯಕಲಾಪದ ಸಮಿತಿಯ ವಿಷಯಗೂ ಇದೆ. ಅದನ್ನು ಮೊಟಕು ಮಾಡುವಂತಹ, ಭಿನ್ನಾಭಿಪ್ರಾಯ ಮಾಡುವಂತದ್ದನ್ನು ತಾವು ಮಾಡಬಾರದು ಮತ್ತು ಸಭಾನಾಯಕರು ಮಾಡಬಾರದು ಹಾಗೂ ಈ ಕಡೆಯವರು ಮಾಡಬಾರದು. ಇದನ್ನು ತಾವು ಗಮನಕ್ಕೆ ತೆಗೆದುಕೊಂಡು ವಿಚಾರಮಾಡಬೇಕೆಂದು ಕೇಳಿಕೊಳ್ಳುತ್ತೇನೆ ಮುಂದೆ ಇಂತಹ ಪರಿಸ್ಥಿತಿ ಈ ಸದನದಲ್ಲಿ ಅಥವಾ ಸದನದ ಕಾರ್ಯಕಲಾಪದ ಸಮಿತಿಯಲ್ಲಿ ಉದ್ಭವವಾಗಬಾರದು ಎನ್ನುವ ಒಂದು ಸತ್ಕಾರಣದಿಂದ ಇದನ್ನು ಎತ್ತಿದ್ದೇವೆಯೂ ಹೊರತು ಅನ್ಯಥಾ ತಮ್ಮ ಅಧಿಕಾರದ ಬಗ್ಗೆ ಇದನ್ನು ಪ್ರಶ್ನೆ ಮಾಡುತ್ತಾ ಇದ್ದೇವೆಂದು ತಾವು ದಯವಿಟ್ಟು ತಿಳಿದುಕೊಳ್ಳಬಾರದು.

ಅಧ್ಯಕ್ಷರು.—ನಿನ್ನೆ ತೀರ್ಮಾನ ಮಾಡಿದರೂ ಕೂಡ ಇಬ್ಬರಿಗೂ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಮತ್ತೊಮ್ಮೆ ಸದನದ ಕಾರ್ಯಕಲಾಪದ ಸಮಿತಿಯ ಸಭೆಯನ್ನು ಕರೆದಿದ್ದೇವೆ ಈಗ ಅವರು ಏನು ಹೇಳುತ್ತಾರೆಂದರೆ ನಿನ್ನೆ ಏನು ತೀರ್ಮಾನ ಮಾಡಿದವು ಅದನ್ನು ಪ್ರಕಟಣೆ ಮಾಡಿಯೆಂದು.

ಶ್ರೀ ಎಸ್. ಆರ್. ಬೊಮ್ಮಾಯಿ.—ನಿನ್ನೆಯೇ ಅದನ್ನು ಪ್ರಕಟಣೆ ಮಾಡಿದ್ದರೆ ಚೆನ್ನಾಗಿತ್ತು. ಈ ವಿಚಾರದಲ್ಲಿ ಚರ್ಚೆಗೆ ಬಯಸುವುದಕ್ಕಿಂತ ಬದಲಾಗಿ ನೀವು ಮೂರು ಗಂಟೆಗೆ ಮಂತ್ರಿಮಂಡಲ ಕರೆದಿದ್ದೀರಿ. ಈ ಮನೆಯ ಕೆಲಸ ಸಾಗಬೇಕಾಗಿರುವುದರಿಂದ ಹೊಂದಾಣಿಕೆ ಅತ್ಯಾವಶ್ಯಕ. ಒಬ್ಬರಿಗೊಬ್ಬರು ವಿಚಾರ ಮಾಡಿ ಆಲೋಚನೆ ಮಾಡುವುದು ಅವಶ್ಯಕವಾಗಿದೆ. ಮೂರು ಗಂಟೆಗೆ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳೋಣ, ಈ ಮಧ್ಯ ತಾವು ಪ್ರಕಟಣೆ ಮಾಡುವುದು ಬೇಡ.

ಶ್ರೀ ಬಿ. ಎಸ್. ಯಡಿಯೂರಪ್ಪ.—ವಿರೋಧಪಕ್ಷದವರ ಅಭಿಪ್ರಾಯ, ಮೊಯಿಲಿಯವರ ಅಭಿಪ್ರಾಯ ನೋಡಿದರೆ, ತಮಗೆ ಅಧಿಕಾರವಿಲ್ಲ ಎನ್ನತಕ್ಕ ಪ್ರಶ್ನೆಯಲ್ಲ ಈಗಾಗಲೇ ಮೂರು ಗಂಟೆಗೆ ಸಭೆ ಕರೆಯುವುದಕ್ಕೆ ಹೇಳಿದ್ದೀರಿ, ಇದು ಒಂದು ವಿಚಿತ್ರವಾದ ಸಂದರ್ಭ. ಕುಳಿತುಕೊಂಡು ಚರ್ಚೆ ಮಾಡುವುದು ವಿಶೇಷವಾದ ಸಂದರ್ಭ. ಅವಕ್ಕೋಸ್ಕರ ಮೂರು ಗಂಟೆಗೆ ಸೇರಿ ಚರ್ಚೆ ಮಾಡೋಣ.

ಅಧ್ಯಕ್ಷರು.—ನಿಮ್ಮ ಎರಡು ಕಡೆಯ ಮುಖಂಡರು, ಅಂದರೆ ವಿರೋಧಪಕ್ಷದ ನಾಯಕರು ಮತ್ತು ಸಭಾನಾಯಕರ ನಡುವೆ ಯಾವ ತರಹ ಭಿನ್ನಾಭಿಪ್ರಾಯ ಬೇಡ ಎನ್ನುವ ದೃಷ್ಟಿಯಿಂದ ಕರೆದಿದ್ದೇವೆಯೆ ಹೊರತು ಬೇರೆ ದೃಷ್ಟಿಯಿಂದ ಅಲ್ಲ. ಸಭೆಯು ಕಾರ್ಯ ಕಲಾಪಗಳು ಸುಗಮವಾಗಿ ನಡೆಯಬೇಕು. ನಿಮ್ಮ ಚರ್ಚೆಗಳು ಸರಿಯಾಗಿ ನಡೆಯಬೇಕು ಆ ದೃಷ್ಟಿಯಿಂದ ನಾನು ಹೇಳಿದ್ದುದು.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಸಭಾಧ್ಯಕ್ಷರೇ, ಸರ್ಕಾರದ ಪರವಾಗಿ ಬೊಮ್ಮಾಯಿಯವರು ಕೂಡ ತಮ್ಮ ಹೇಳಿಕೆಯನ್ನು ಕೊಟ್ಟಿದ್ದಾರೆ. ನಿನ್ನೆ ತೆಗೆದುಕೊಂಡು ತೀರ್ಮಾನ ನಿಜ ಎಂಬ ಮಾತನ್ನು ಅವರು ಹೇಳಿರುವುದರಿಂದ ಅವರಿಗೆ ನಾನು ಅಭಿನಂದಿಸಂತ್ತೇನೆ.

೧–೦೦ ಪಿ.ಎಂ.

ಸರ್ವಾನುಮತವಾಗಿ ತೀರ್ಮಾನ ಮಾಡಿ ೧೫ನೇ ಮತ್ತು ೧೪ನೇ ತಾರೀಖು ಆರ್ಯಾಕ್ ಬಾಟ್ಲಿಂಗ್ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಮತ್ತು ಪಂಂದಿನ ತಿಂಗಳು ೬ನೇ ತಾರೀಖು ಸಪ್ಲಿಮೆಂಟರಿ ಎಸ್ಟಿಮೇಟ್ಸ್‌ನ್ನು ತೆಗೆದುಕೊಳ್ಳಬೇಕೆಂದು, ೧೬ನೇ ತಾರೀಖು ಬಜೆಟ್ ಪ್ರೆಸೆಂಟ್ ಮಾಡ ಬೇಕು, ೧೮ ರಿಂದ ಡಿಷ್‌ಕ್ವಷನ್ ಕಮೆನ್ಸ್ ಮಾಡಬೇಕು ಎನ್ನುವುದು ನಿನ್ನೆಯ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನವಾಗಿದೆ. ಇನ್ನು ಬೇರೆ ಬೇರೆ ಬಿಲ್‌ಗಳ ವಿಚಾರ ಬಂದಾಗ ಡೇಟ್ ಫೈಸ್ ತೆಗೆದುಕೊಳ್ಳೋಣವೆಂದು ತೀರ್ಮಾನ ಮಾಡಿದ್ದೇವೆ. ಇದನ್ನು ಇಲ್ಲ ಎನ್ನತಕ್ಕ ಮಾತನ್ನು ಅವರೂ ಹೇಳುತ್ತಿಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ.–ಈ ನಿರ್ಣಯವನ್ನು ನಾವು ಕೈಗೊಳ್ಳುವಾಗ ಸಭಾ–ನಾಯಕರು ಸಭೆಯಲ್ಲಿ ಇರಲಿಲ್ಲ.

ಅಧ್ಯಕ್ಷರು.—ಇವೊತ್ತು ಮಧ್ಯಾಹ್ನ ೩ ಗಂಟೆಗೆ ಬಿಸಿನೆಸ್ ಅಡ್ವೈಸರಿ ಮಿಾಟಿಂಗ್‌ನ್ನು ಕರೆದಿದ್ದೇವೆ. ಆಗ ಮಾಡೋಣ.

ಶ್ರೀ ಎಸ್.ಬಂಗಾರಪ್ಪ.—ನೀವು ೩ ಗಂಟೆಗೆ ಕರೆದ ತಕ್ಷಣ ನಾವು ಬರುವುದಕ್ಕೆ ಅಲ್ಲ ನಾವು ಇಲ್ಲಿ ಕುಳಿತಿರುವುದು. ನೀವು ಕರೆಯುತ್ತಲೇ ಇರುವುದು ನಾವು ಬರುತ್ತಲೇ ಇರುವುದು ಇದಕ್ಕೇ, ಏನೂ ನಾವು ಇಲ್ಲಿ ಬರುವುದು?

ಅಧ್ಯಕ್ಷರು.—ಇಬ್ಬರಿಗೂ ಅವಕಾಶ ಕೊಡಬೇಕೆಂಬುದೇ ನನ್ನ ಉದ್ದೇಶ.

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಬಗ್ಗೆ ನಮಗೆ ಅಪಾರವಾದ ಗೌರವ ಇದೆ. ನಿನ್ನೆ ಸಭಾ ನಾಯಕರು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಇರಲಿಲ್ಲವೆಂದು ಹೇಳುತ್ತಾರೆ. ಅವರು ಇಲ್ಲದಿದ್ದರೆ, ಅಲ್ಲಿ ನಡೆದಿರುವ ಪ್ರಕಾರ ಕಾರ್ಯಕಲಾಪ ನಡೆಯಬಾರದೆ ?

ಅಧ್ಯಕ್ಷರು.—ಬಿಸಿನೆಸ್ ಅಡ್ವೈಸರಿ ಕಮಿಟಿಯನ್ನು ಮತ್ತೆ ಕರೆದಿದ್ದೇನೆ. ದಯವಿಟ್ಟು ತಾವು ಕುಳಿತುಕೊಳ್ಳಿ. ಬಿಸಿನೆಸ್ ಅಡ್ವೈಸರಿ ಕಮಿಟಿಯ ತೀರ್ಮಾನದ ಪ್ರಕಾರ ಕಾರ್ಯಕಲಾಪ ನಡೆಸುವುದು ನನ್ನ ಕರ್ತವ್ಯವೆಂಬುದನ್ನು ನಾನು ಒಪ್ಪುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ನಿನ್ನೆ ನಡೆದ ಬಿಸಿನೆಸ್ ಅಡ್ವೈಸರಿ ಕಮಿಟಿ ತೀರ್ಮಾನದ ಪ್ರಕಾರ ಇವತ್ತು ಕಾರ್ಯಕಲಾಪ ನಡೆಯಬೇಕಾಗಿತ್ತಲ್ಲವೇ?

ಅಧ್ಯಕ್ಷರು.—೩ ಗಂಟೆಯ ಮೇಲೆ ಈ ವಿಷಯವನ್ನು ಅನೌನ್ಸ್ ಮಾಡೋಣವೆಂದು ಬಿಟ್ಟಿದ್ದೆ.

ಶ್ರೀ ಎಸ್. ಬಂಗಾರಪ್ಪ.—ಏಕೆ ಬಿಟ್ಟಿದ್ದೀರಿ? ಒಂದು ಸಾರಿ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನವಾದ ಮೇಲೆ ಮಂತ್ರಿಯಂದು ಸಾರಿ ತೀರ್ಮಾನ ಮಾಡುವುದು ಏಕೆ?

ಅಧ್ಯಕ್ಷರು.—ಅಂತಹ ಪ್ರಸಂಗ ಬಂದಿರುವುದರಿಂದ ಮತ್ತೊಂದು ಸಾರಿ ಬಿಸಿನೆಸ್ ಅಡ್ವೈಸರಿ ಕಮಿಟಿಯನ್ನು ಕರೆಯಬೇಕಾಗಿದೆ. ಮಾನ್ಯ ಮುಖ್ಯ ಮಂತ್ರಿಯವರು ನಾನು ಈ ದಿನ ಸಭೆಯಲ್ಲಿ ಇರುವುದಿಲ್ಲವೆಂದು ತಿಳಿಸಿದ್ದರಿಂದ ಮತ್ತೆ ಬಿಸಿನೆಸ್ ಅಡ್ವೈಸರಿ ಕಮಿಟಿಯನ್ನು ಕರೆಯಬೇಕಾಗಿದೆ.

ಶ್ರೀ ಎಸ್. ಬಂಗಾರಪ್ಪ.—ಮೊನ್ನೆಯ ದಿನ ನಾವು ಬಾಟ್ಲಿಂಗ್ ಹಗರಣದ ಬಗ್ಗೆ ಚರ್ಚೆ ಮಾಡಲೇ ಬೇಕೆಂದು ಮುಖ್ಯಮಂತ್ರಿಗಳಲ್ಲಿ ಕೇಳಿದಾಗ ಅವರು ನಮ್ಮೊಡನೆ ಚರ್ಚೆ ಮಾಡಿ, ಈ ವಿಷಯದಲ್ಲಿ ಮುಂದೆ ಬೇರೆ ದಿನಗಳಲ್ಲಿ ಚರ್ಚೆ ಮಾಡೋಣವೆಂದು ಹೇಳಿದ್ದರು. ಅದಷ್ಟು ಶೀಘ್ರವಾಗಿ ಈ ಬಗ್ಗೆ ಚರ್ಚೆಯಾಗಬೇಕೆಂದು ನಾವು ಕೇಳಿ ನಿನ್ನೆ ನಡೆದ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಬಾಟ್ಲಿಂಗ್ ಬಗ್ಗೆ ಚರ್ಚೆಯನ್ನು ಈ ದಿನ ಪ್ರಾರಂಭಿಸಬೇಕೆಂದು ತೀರ್ಮಾನವಾಗಿತ್ತು. ಆದರೆ ಇವತ್ತು ಅದನ್ನು ಮುಂದಕ್ಕೆ ಹಾಕುತ್ತಿದ್ದೀರಿ. ಶುಕ್ರವಾರದೊಳಗೆ ಬಾಟ್ಲಿಂಗ್ ಬಗ್ಗೆ ಚರ್ಚೆ ಮುಗಿಯಬೇಕು. ಹಾಗಿದ್ದರೆ ಮಾತ್ರ ನಾವು ಚರ್ಚೆಗೆ ಬರುತ್ತೇವೆ ಇಲ್ಲದಿದ್ದರೆ ನಾವು ಬರುವುದಿಲ್ಲವೆಂದು ನಾನು ಸ್ಪಷ್ಟವಾಗಿ ವಿರೋಧಪಕ್ಷದ ಪರವಾಗಿ ಹೇಳುತ್ತಿದ್ದೇನೆ.

ಅಧ್ಯಕ್ಷರು.—ಬಿಸಿನೆಸ್ ಅಡ್ವೈಸರಿ ಕಮಿಟಿಯನ್ನು ೩ ಗಂಟೆಗೆ ಕರೆಯಲಾಗಿದೆ. ಆಗ ತೀರ್ಮಾನ ಮಾಡೋಣ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ನೀವು ಹೇಳಿದ್ದೀರೆಂದು ನಿಮ್ಮ ಮೇಲೆ ಗೌರವವನ್ನು ಇಟ್ಟು ಬಿಸಿನೆಸ್ ಅಡ್ವೈಸರಿ ಕಮಿಟಿಗೆ ಬರುತ್ತೇವೆ.

ಶ್ರೀ ಎಂ. ರಘುಪತಿ.—ನಿಮ್ಮನ್ನು ಎಷ್ಟು ಪದಗಳಲ್ಲಿ ವರ್ಣಿಸಬೇಕೋ ಅಷ್ಟು ವರ್ಣನೆ ಮಾಡಿ, ಆಮೇಲೆ ನಿಮ್ಮ ಮೇಲೆ ಅಪಾರವಾದ ಗೌರವ ಇದೆ ಎಂದು ಹೇಳುತ್ತಾರೆ.

ಅಧ್ಯಕ್ಷರು.—ಅದು ನಮ್ಮ ಘನತೆ ಬಗ್ಗೆ ಮತ್ತು ಅವರ ಘನತೆ ಬಗ್ಗೆ ಹಾಗೂ ನಮ್ಮ ಕುಂದಿನ ಬಗ್ಗೆ ಮತ್ತು ಅವರ ಕುಂದಿನ ಬಗ್ಗೆ ಹೇಳಿದ್ದಾರೆ.

ಶ್ರೀ ಹೆಚ್.ಟಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೇ, ನಿಮ್ಮ ಮತ್ತು ವಿರೋಧ ಪಕ್ಷದ ನಾಯಕರೊಡನೆ ಪ್ರತಿ ದಿನ ಈರೀತಿ ಮಾತುಕತೆಗಳು ನಡೆಯುತ್ತಲೇ ಇರುತ್ತವೆ. ಆದುದರಿಂದ ಇನ್ನು ಮೇಲೆ ಕಾರ್ಯಕಲಾಪದ ಪಟ್ಟಿಯಲ್ಲಿ ನಿಮ್ಮ ಮಾತುಕತೆಯು ಕಾರ್ಯಕಲಾಪವನ್ನು ಸೇರಿಸಿ ಬಿಟ್ಟರೆ ಒಳ್ಳೆಯದು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ರಘುಪತಿಯವರಿಗೆ ಈ ರೀತಿ ಹೇಳುವುದಕ್ಕೆ ಬರುವುದಿಲ್ಲ. ಇದು ಹೊಗಳಿಕೆಗೆ ಸಂಬಂಧ ಇಲ್ಲ.

ಶ್ರೀ ಎಂ. ರಘುಪತಿ.—ಹೊಗಳಿ ಹೊಗಳಿ ಹೊನ್ನ ಶೂಲಕ್ಕೆ ಏರಿಸಬೇಡಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಒಂದು ವಿಚಾರವನ್ನು ಹೇಳುವುದೇನೆಂದರೆ, ಇದೇ ತಿಂಗಳು ೧೦ನೇ ತಾರೀಖು ''ಉದಯವಾಣಿ'' ಪತ್ರಿಕೆಯಲ್ಲಿ ಮಾನ್ಯ ರಾಚಯ್ಯನವರ ಹೇಳಿಕೆ ಬಂದಿದೆ. ಕೊಲೆ ಮತ್ತು ದರೋಡೆ ನಡೆಯುವುದಕ್ಕೆ ರಾಜಕೀಯ ಪಕ್ಷಗಳ ಬೆಂಬಲ ಇದೆ ಎಂದು ಈ ಹೇಳಿಕೆಯಲ್ಲಿ ಇದೆ.

(ಗೊಂದಲ)

ಕೊಲೆ ದರೋಡೆ ಯಂತ್ನಗಳಲ್ಲಿ ರಾಜಕೀಯ ಕೈವಾಡ ಇದೆ ಎಂದು ತಿಳಿಸಿದ್ದಾರೆ. ಇದಕ್ಕೆ ಪತ್ರಕರ್ತರು ಇವರಿಗೆ ಪ್ರಶ್ನೆ ಹಾಕಿದ್ದಾರೆ. ಅವರ ಪ್ರಶ್ನೆಗೆ ಉತ್ತರಿಸಲು ಮಾನ್ಯ ಸಚಿವರು ನಿರಾಕರಿ

ಸಿದರು ಎಂದು ಇಲ್ಲಿ ಇದೆ. ನಾನು ಡಿಮ್ಯಾಂಡ್ ಮಾಡುತ್ತೇನೆ, ಯಾವ ರಾಜಕೀಯ ಪಕ್ಷದವರು ಇದಕ್ಕೆ ಬೆಂಬಲ ಕೊಡುತ್ತಾರೆ ಎನ್ನುವುದನ್ನು ಹೇಳಿದರೆ ಒಳ್ಳೆಯದು.

(ಗೊಂದಲ)

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ಈ ವಿಷಯವನ್ನು ಸಿಳಿರ ನಿಯಮದ ಮೇಲೆ ಕಳುಹಿಸಿಕೊಡಿ. ನಿಮಗೆ ಕ್ಲಾರಿಫಿಕೇಷನ್ ಕೊಡಿಸುತ್ತೇನೆ,

ಶ್ರೀ ಎಸ್. ಬಂಗಾರಪ್ಪ—ಈ ಕೊಲೆ ಮತ್ತು ದರೋಡೆಗಳಿಗೆ ಕಾಂಗ್ರೆಸ್ ಪಕ್ಷದವರು ಬೆಂಬಲ ಕೊಡುತ್ತಿದ್ದಾರೋ, ಬಿ.ಜೆ.ಪಿ. ಯವರು ಕೊಡುತ್ತಿದ್ದಾರೋ, ಕಮ್ಯುನಿಸ್ಟ್ ಪಕ್ಷದವರು ಕೊಡುತ್ತಿದ್ದಾರೋ ಅಥವಾ ಮತ್ತೊಬ್ಬರು ಮಾಡಿಸುತ್ತಿದ್ದಾರೊ?

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. Nothing will go on record

ಶ್ರೀ ಎಂ. ರಘುಪತಿ.—ಸಭೆಯಲ್ಲಿ ಮಾತನಾಡುವುದಕ್ಕೆ ತಮಗೆ ರೂಲ್ಸ್ ಇಲ್ಲ ರೆಗ್ಯೂಲೇಷನ್ನೂ ಇಲ್ಲ. ಎಲ್ಲವನ್ನೂ ತೂರಿ ಮಾತನಾಡುವುದಾದರೆ ಮಾತನಾಡಿ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು.—ಈ ವಿಷಯವನ್ನು ಸಿ ಳಿರ ನಿಯಮದ ಮೇರೆಗೆ ಕಳುಹಿಸಿಕೊಡಿ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ಪಾರ್ಲಿಮೆಂಟ್ ಅಫೇರ್ಸ್ ಮಿನಿಸ್ಟರ್ ಮಾತನಾಡುತ್ತಾರೆ ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಎಂ. ರಘುಪತಿ.—ಪ್ರತಿಯೊಬ್ಬರೂ ಎದ್ದು ಮಾತನಾಡುವುದನ್ನು ನಿಲ್ಲಿಸಿ. ಲಾ ಮಿನಿಸ್ಟರ್ ರವರು ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಆಧ್ಯ, ಸಭೆಯ ನಿಯಕ್ಷೆಮಾವಳಿಯ ಪ್ರಕಾರ, ಈ ಸಭೆಯ ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗಬೇಕು ಎನ್ನುವುದು ಎಲ್ಲರ ಅಭಿಪ್ರಾಯ. ನಿಯಮಾವಳಿಗಳ ವ್ಯಾಪ್ತಿಯಲ್ಲಿ ತಾವು ನಡೆದುಕೊಳ್ಳಬೇಕೆಂಬ ವಿಚಾರ ಎಲ್ಲರಿಗೂ ಗೊತ್ತಿರುವ ವಿಚಾರ. ಸನ್ಮಾನ್ಯ ವಿರೋಧಪಕ್ಷದ ನಾಯಕರಿಗೆ ನಾನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಇವತ್ತು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಈ ವಿಷಯವಾಗಿ ಮಾತನಾಡಿದರು.

ಅದಕ್ಕೆ ಸರಿಯಾದಂಥ ಉತ್ತರ, ಅದು ಅಲ್ಲಿಗೆ ನಿಂತುಹೋಯಿತು. ಯಾವುದೋ ಒಂದು ಮುಖ್ಯವಾದ ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದು ಹೇಳಿ, ವಿರೋಧಪಕ್ಷದ ನಾಯಕರು ವೃತ್ತಪತ್ರಿಕೆಯಿಂದ ಓದುವುದಕ್ಕೆ ಪ್ರಾರಂಭ ಮಾಡಿದ್ದಾರೆ. ನಾನು ಆವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ನಿಯಮಾವಳಿಗಳನ್ನು ಬಿಟ್ಟು ನಡೆದುಕೊಳ್ಳತಕ್ಕಂಥಾದ್ದು ಸರಿಯಲ್ಲ. ಇದರಿಂದ ಈ ಸಭೆಯ ಕಾರ್ಯಕಲಾಪಗಳನ್ನು ಸದನದಲ್ಲಿ ಸುಗಮವಾಗಿ ನಡೆಸಿಕೊಂಡು ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರು, ಶೂನ್ಯ ವೇಳೆಯಲ್ಲಿ ಪ್ರಾಮುಖ್ಯವಾದಂತಹ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ವಿರೋಧಪಕ್ಷದ ನಾಯಕನಾಗಿ ನಾನು ಅಧಿಕಾರವನ್ನು ಹೊಂದಿದ್ದೇನೆ ಎಂದು ಹೇಳಿದ್ದಾರೆ. ಈ ಜೀರೋ ಹವರ್ ತೆಗೆದೇ ನಾವು ನಿಯಮ ಸಿಳಿಗನ್ನು ಇಟ್ಟುಕೊಂಡಿದ್ದೇವೆ. ಇದರ ಬಗ್ಗೆ ಹಿಂದೆ ಇದ್ದ ಅಧ್ಯಕ್ಷರು ಒಂದು ರೂಲಿಂಗ್‌ನ್ನು ಕೊಟ್ಟಿದ್ದಾರೆ. ಪಾರ್ಲಿಮೆಂಟ್‌ನಲ್ಲಿ ಸಿಳಿರ ಅನ್ವಯ ಇರುವುದನ್ನು ಇಲ್ಲಿ ಸಿಳಿಳ ಎಂದು ಹೇಳಿ ಸೇರಿಸಿಕೊಂಡು ಈ ಸಂಪ್ರದಾಯವನ್ನು ಬೆಳೆಸಿಕೊಂಡು ಬಂದಿದ್ದಾರೆ. ಆದುದರಿಂದ ಏನಾದರೂ ಅವಶ್ಯಕವಾಗಿ ಪ್ರಸ್ತಾಪ ಮಾಡಬೇಕೆಂದಿದ್ದರೆ, ನಿಯಮಾವಳಿಯಲ್ಲಿ ಸಿಳಿಳ ಹಾಗೂ ಬೇರೆ ನಿಯಮಗಳ ಪ್ರಕಾರ ಪ್ರಸ್ತಾಪ ಮಾಡುವುದಕ್ಕೆ ಅವಕಾಶಗಳು ಇವೆ. ನಾನು ತಮ್ಮ ಮೂಲಕ ಮಾನ್ಯ ವಿರೋಧಪಕ್ಷದ ನಾಯಕರವರಲ್ಲಿ ವಿನಂತಿ ಮಾಡಿಕೊಳ್ಳುವು

ದೇನೆಂದರೆ, ನಾವೆಲ್ಲರೂ ಸಭೆಯ ನಿಯಮಾವಳಿಗಳ ಚೌಕಟ್ಟಿನಲ್ಲಿ ನಡೆದುಕೊಂಡು ಹೋಗುವುದು ಉತ್ತಮ. ಇಲ್ಲದೇ ಹೋದರೆ ಸಭೆಗೆ ತನ್ನ ನಿರ್ದಿಷ್ಟ ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗುವುದು ಕಷ್ಟವಾಗುತ್ತದೆ. ಬೇಕಾದಂತಹ ಸಮಯದಲ್ಲಿ ನಿಯಮಾವಳಿಗಳನ್ನು ಬಿಟ್ಟು ಸಭೆಯ ಕಾರ್ಯಕಲಾಪಗಳನ್ನು ನಡೆಸಬಹುದು ಎಂದು ಮಾನ್ಯರು ಅಭಿಪ್ರಾಯ ಪಟ್ಟಿಲ್ಲ ಎಂದು ನಾನು ಅಂದುಕೊಂಡಿದ್ದೇನೆ. ಗಹನವಾದಂತಹ ವಿಚಾರವನ್ನು ತಮ್ಮ ಮೂಲಕ ಸಭೆಯ ಗಮನಕ್ಕೆ ತರತಕ್ಕಂತಹ ಅಧಿಕಾರ ಎಲ್ಲರಿಗೂ ಇದೆ, ಅದೇ ರೀತಿಯಲ್ಲಿ ನಮಗೂ ಅನೇಕ ವಿಚಾರಗಳನ್ನು ಹೇಳುವುದಿದೆ.. ನಾವು ಕಾನೂನಿನ ಚೌಕಟ್ಟಿನಲ್ಲಿ ನೋಡಿಕೊಂಡು ಅವುಗಳೆಲ್ಲವನ್ನೂ ಹೇಳಬೇಕಾಗುತ್ತದೆ ಅದಕ್ಕಾಗಿ ಯಾವುದೇ ವಿಚಾರಗಳನ್ನು ಸಭೆಯ ಮುಂದೆ ತರುವುದಕ್ಕಾಗಿ ನಿಯಮಾವಳಿಗಳನ್ನು ಮಾಡಿಕೊಂಡಿದ್ದಾರೆ. ಆದುದರಿಂದ ವಿಷಯ ಪ್ರಸ್ತಾಪನೆಗೆ ಮುನ್ನ ತಮ್ಮ ಅಪ್ಪಣೆಯನ್ನು ಕೇಳಿ ನಿಯಮಾವಳಿಗಳ ಚೌಕಟ್ಟಿನಲ್ಲಿ ಮಾಡಬೇಕಾಗುತ್ತದೆ. ಅಷ್ಟಲ್ಲದೆ ಈ ಸಭೆ ತಮಗೆ ಅಧಿಕಾರವನ್ನು ಕೊಟ್ಟಿದೆ. ಆದುದರಿಂದ ನಾನು ಅವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಮಾನ್ಯರಿಗೆ ಈ ಎಲ್ಲಾ ವಿಷಯಗಳು ಗೊತ್ತಿದೆ. ಈ ಪ್ರಸ್ತಾವನೆಯನ್ನು ಷಿಷಿಳಿರಲ್ಲಿ ಕಳುಹಿಸಬಹುದು, ಬೇರೆ ನಿಯಮಾವಳಿಗಳಲ್ಲಿ ಕಳುಹಿಸಬಹುದು. ಬೇರೆ ದಾರಿಗಳೂ ಇವೆ. ಅದು ಅವರಿಗೆ ಗೊತ್ತಿದೆ. ಆದುದರಿಂದ ಮುಂದಿನ ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗುವುದಕ್ಕೆ ಅನುವು ಮಾಡಿಕೊಡಬೇಕೆಂದು ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಆಗ ಷಿ೧೦ನೇ ನಿಯಮ ಇತ್ತು. ಅದರ ಪರವಾಗಿ ಷಿಷಿಳಿ ಇಲ್ಲಿ ಬಂದಿದೆ. ನಾವು ಪ್ರಶ್ನೆ ಮಾಡಿದಾಗ.....

ಅಧ್ಯಕ್ಷರು.—ತಾವು ಷಿಷಿಳಿರ ಪ್ರಕಾರ ಕೇಳಿ. ಇಲ್ಲದಿದ್ದರೆ ಅಡ್ಜರ್ನ್‌ಮೆಂಟ್ ಮೋಷನ್ ಮೂಲಕ ಕಳುಹಿಸಿದ್ದರೂ ಕೂಡ ನಾನು ಅದರ ಅಡ್ಮಿಸಿಬಿಲಿಟಿ ಬಗ್ಗೆ ಮಾತನಾಡಲಿಕ್ಕೆ ಅವಕಾಶ ಕೊಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಕಾನೂನು ಸಚಿವರು ಇಲ್ಲಿ ಕೆಲವು ಮಾತುಗಳನ್ನು ಹೇಳಿದರು. ತಮಗೆ ಗೊತ್ತಿದೆ, ಜೀರೋ ಹವರ್ ಎನ್ನುತಕ್ಕಂಥಾದ್ದು ಕೋಡಿಫೈ ಆಗಿ ಬಂದಂತಹ ರೂಲ್ ಅಲ್ಲ. ಲೋಕಸಭೆಯಲ್ಲಾಗಲೀ, ಬೇರೆ ಯಾವುದೇ ಶಾಸನಸಭೆಗಳಲ್ಲಾಗಲೀ, ಹೌಸ್ ಆಫ್ ಕಾಮನ್ಸ್‌ನಲ್ಲಾಗಲೀ ಎಲ್ಲಾದರೂ ಕೂಡ ಒಂದು ರೀತಿಯಲ್ಲಿ ವಿಶೇಷವಾದಂತಹ ಪ್ರಸಂಗಗಳಲ್ಲಿ ಸಂಸದೀಯ ವ್ಯವಹಾರಗಳಲ್ಲಿ ಇದನ್ನು ಉಪಯೋಗ ಮಾಡಿಕೊಂಡು ಬಂದಿದ್ದಾರೆ. ಇಲ್ಲಿಯೂ ಕೂಡ ಉಪಯೋಗ ಮಾಡಿಕೊಂಡು ಬಂದಿದ್ದಾರೆ, ಮಾನ್ಯ ಸಚಿವರು ನಿಯಮ ಷಿಷಿಳನ್ನು ಜೀರೋ ಹವರ್‌ಗೆ ಬದಲಾಗಿ ಆಳವಡಿಸಿದ್ದೇವೆಂದು ಹೇಳಿದ್ದಾರೆ. ಅದು ಸರಿಯಲ್ಲ. ಷಿ೧೨ರ ಬದಲು, ಷಿ೧೦ ಇತ್ತು ಜೀರೋ ಹವರ್ ಷಿಷಿಳಿಕ್ಕೆ ಸರಿಯಾಗುತ್ತದೆಯೇ ? ಆದುದರಿಂದ ಷಿಷಿಳನ್ನು ಜೀರೋ ಹವರ್ ಬದಲಾಗಿ ಹಾಕಲಾಗಿದೆ ಎಂದು ಕಾನೂನು ಸಚಿವರು ಹೇಳಿದರು ಅದು ಸರಿಯಲ್ಲ. ಆದರೆ ಇಲ್ಲಿ ಕಾರ್ಯಕಲಾಪಗಳನ್ನು ವ್ಯವಹಾರಿಕವಾಗಿ ನಡೆಸಿಕೊಂಡು ಹೋಗತಕ್ಕಂತಹ ಒಂದು ದೃಷ್ಟಿಯಲ್ಲಿ ಎದುರಿನ ಬೆಂಚ್‌ನವರು ಮತ್ತು ವಿರೋಧಪಕ್ಷದ ನಾಯಕರು ಎಲ್ಲರೂ ಒಪ್ಪಿಕೊಂಡು ಜೀರೋ ಹವರ್ ಉಪಯೋಗ ಮಾಡಿಕೊಂಡು ಬಾಕಿ ವ್ಯವಹಾರಗಳನ್ನು ಬದಿಗೊತ್ತತಕ್ಕಂಥ ಪ್ರಯತ್ನವನ್ನು ಮಾಡುವುದು ಬೇಡ. ಈ ಅಂಡರ್‌ಸ್ಟ್ಯಾಂಡಿಂಗ್‌ನಲ್ಲಿ ಈ ಕನ್ವೆನ್ಷನ್‌ನ್ನು ಬದಿಗೊತ್ತಿಕೊಳ್ಳುವುದು ಬೇಡ. ಆದರೆ ಜೀರೋ ಹವರ್‌ನ್ನು ನಾವು ಎತ್ತಲೇಬಾರದು ಎಂದು ನಿಯಮ ಇಲ್ಲ. ವಿಶೇಷ ಸಂದರ್ಭದಲ್ಲಿ ಷಿಷಿಳಿ ಆಗಲೀ, ಬೇರೆ ಯಾವುದೇ ಆಗಲೀ ವಿಶೇಷ ಸಂದರ್ಭ ಬಂದರೆ ಅದನ್ನು ನಡೆಸಲಿಕ್ಕೆ ಅವಕಾಶ ಕೊಡದಿದ್ದರೆ, ಅಂತಹ ಪ್ರಸಂಗಗಳಲ್ಲಿ ಜೀರೋ ಹವರ್ ಬೇಕು. ಇವೊತ್ತು ಏನಾಗಿದೆ ತಾವು ಬಿ ಎ.ಸಿ. ಯಲ್ಲಿ ಅದನ್ನು ಅನೌನ್ಸ್ ಮಾಡಬೇಕಾಗಿತ್ತು. ಇದರ ಬಗ್ಗೆ ನಾನು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಒಂದು ವಿಷಯ, ಇದರಿಂದ ಈಗ ಸ್ವಲ್ಪ ವ್ಯಾಕ್ಯೂಮ್ ಕ್ರಿಯೇಟ್ ಆಗಿದೆ. ನಿನ್ನೆ ಏನು ಒಂದು ಲೋಪ ಆಗಿದೆ ಅದರ ಬಗ್ಗೆ ಒಂದು ವ್ಯಾಕ್ಯೂಮ್ ಕ್ರಿಯೇಟ್ ಆಗಿದೆ, ಅದನ್ನು ವಿರೋಧಿ ಪಕ್ಷದ ನಾಯಕರು ಉಪಯೋಗ ಮಾಡಿರಬಹುದು. ಎರಡನೆಯದಾಗಿ, ಇವೊತ್ತು ಇಡೀ ರಾಜಕೀಯ ಪಕ್ಷಗಳಿಗೆ, ಒಂದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಒಂದು ರೀತಿಯಾದಂತಹ ಆಘಾತವಾಗಿರತಕ್ಕಂತಹ ಹೇಳಿಕೆಯನ್ನು ಗೃಹ ಸಚಿವರು ಇವೊತ್ತು ಕೊಟ್ಟಿದ್ದಾರೆ. ಇದನ್ನು ಯಾವ ನಿಯಮದ ಪ್ರಕಾರ ತರುವುದು ನಾವು ?

ಶ್ರೀ ಬಿ. ರಾಚಯ್ಯ.—ಅಧ್ಯಕ್ಷರೇ...

ಶ್ರೀ ಎಂ. ವೀರಪ್ಪ ಮೊಯಿಲಿ.—ರಾಜಕೀಯ ಪಕ್ಷಗಳು ಎಂದರೆ ಯಾವ ರಾಜಕೀಯ ಪಕ್ಷ ? ಇವೊತ್ತು ಕರ್ನಾಟಕ ರಾಜ್ಯ ಇಡೀ ದರೋಡೆ ಆಗುತ್ತಿದೆ. ಗೃಹಸಚಿವರು ತಮ್ಮ ಕರ್ತವ್ಯವನ್ನು ನಿರ್ವಹಿಸುವ ಬದಲು.....

ಶ್ರೀ ಬಿ. ರಾಚಯ್ಯ.—ಉತ್ತರವನ್ನು ಕೊಡಬೇಕಾಗುತ್ತದೆಂದು ಇದನ್ನು ಈಗ ಎತ್ತುತ್ತಿದ್ದಾರೆ. ತಮ್ಮ ಗಮನ ಸೆಳೆಯುವ ಸೂಚನೆ ಬರಲಿ, ಆಗ ಉತ್ತರ ಹೇಳುತ್ತೇನೆ...

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಸಚಿವರು ಉತ್ತರವನ್ನು ಇಷ್ಟು ಆವೇಶದಲ್ಲಿ ಹೇಳುವುದು ಬೇಡ.

ಅಧ್ಯಕ್ಷರು.—ದಯವಮಾಡಿ ಮಾನ್ಯ ಸದಸ್ಯರೆಲ್ಲರೂ ಕುಳಿತುಕೊಳ್ಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ಉದಯವಾಣಿ ದಿನಪತ್ರಿಕೆಯಲ್ಲಿ ಬಂದಿರುವಂತಹ ಹೇಳಿಕೆ ಇಡೀ ರಾಜಕೀಯ ವ್ಯವಸ್ಥೆಗೆ ಒಂದು ಸವಾಲಾಗಿದೆ.

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಬಿ. ರಾಚಯ್ಯ.—ಮಾನ್ಯ ಸದಸ್ಯರು...

ಅಧ್ಯಕ್ಷರು.—ತಾವುಗಳೆಲ್ಲರೂ ಕುಳಿತುಕೊಳ್ಳಿ. ಮಾನ್ಯ ಬೊಮ್ಮಾಯಿಯವರು ಏನು ಹೇಳುತ್ತಾರೆ ಕೇಳೋಣ.

ಶ್ರೀ ಎಸ್. ಎಂ. ಅಡ್ಯಂತಾಯ.—ಮಾನ್ಯ ಗೃಹ ಸಚಿವರು ಯಾವಾಗಲೂ ಫೋಟೋಗಳನ್ನು ತೋರಿಸುತ್ತಾ ಇರುತ್ತಾರೆ. ನಮಗೂ ಫೋಟೊ ಹಿಡಿದುಕೊಳ್ಳುವುದಕ್ಕೆ ಬರುತ್ತದೆ. ಅವರು, When Rome was burning, Nero wasfidling ಎಂದ ಹಾಗೆ ಆಯಿತು...

(ಗೊಂದಲ)

(ಮಾನ್ಯ ಸದಸ್ಯರಾದ ಎಸ್.ಎಂ. ಅಡ್ಯಂತಾಯರವರು ತಮ್ಮ ಆಸನದ ಮೇಲೆ ನಿಂತು ''ನಮಗೆ ರಕ್ಷಣೆ ಕೊಡಿ, ನಮಗೆ ರಕ್ಷಣೆ ಕೊಡಿ'' ಎಂದು ಘೋಷಣೆ ಹಾಕ ತೊಡಗಿದರು...

(ಗೊಂದಲ)

ಅಧ್ಯಕ್ಷರು.—ಈಗ ಯಾವುದೂ ರಿಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಎಸ್. ಎಂ. ಅಡ್ಯಂತಾಯ.—ಮಾನ್ಯ ಅಧ್ಯಕ್ಷರೇ ನಮಗೆ ರಕ್ಷಣೆ ಬೇಕು...

(ಗೊಂದಲ)

ಅಧ್ಯಕ್ಷರು.—ನೀವು ಆ ರೀತಿ ಮಾಡಿದ್ದುದು ಸರಿಯಲ್ಲ. ನಿಮ್ಮ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ...

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ಏನಿದು ?...

ಅಧ್ಯಕ್ಷರು.— ಮಾನ್ಯ ಸದಸ್ಯರಾದ ಆಡ್ಯಂತಾಯರವರು ತಮ್ಮ ಕುರ್ಚಿಯ ಮೇಲೆ ನಿಂತಿದ್ದರು. ತಾವು ನೋಡಲಿಲ್ಲ ಎಂದು ಕಾಣುತ್ತದೆ...

(ಗೊಂದಲ)

ಅಧ್ಯಕ್ಷರು.—ಅಡ್ಯಂತಾಯರವರೇ ಈ ರೀತಿ ಮಾಡಿದ್ದುದು ಸರಿಯಲ್ಲ. ಈಗ ಮಾನ್ಯ ಸದಸ್ಯರು ಮಾತನಾಡಿದ್ದುದು ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ. ದಯವಾಡಿ ಎಲ್ಲರೂ ಕುಳಿತುಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು. —ಮಾನ್ಯ ಸದಸ್ಯರಾದಂಥ ಅಡ್ಯಂತಾಯರವರು ಕುರ್ಚಿಯ ಮೇಲೆ ಹತ್ತಿ ನಿಂತು ಮಾತನಾಡಿದ್ದುದೂ ಸರಿಯಲ್ಲ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ಮಾನ್ಯ ಬೊಮ್ಮಾಯಿಯವರು ಮಾತನಾಡುತ್ತಾರೆ. ಕೇಳಿ...

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಮಾಡಿದಂಥ ಹಾವ ಭಾವ ಈ ಸದನಕ್ಕೆ ಅಗೌರವವನ್ನು ತರತಕ್ಕಂಥಾದ್ದು ಆಗಿದೆ. ಆದ್ದರಿಂದ ಮಾನ್ಯ ಸದಸ್ಯರು ಅನ್-ಕಂಡೀಷನಲ್ ಆಗಿ ಅಪೋಲಜಿ ಕೇಳಬೇಕು,

(ಗೊಂದಲ)

ಅಧ್ಯಕ್ಷರು.—ಬಂಗಾರಪ್ಪನವರೇ ತಾವು ಆ ಕಡೆ ನೋಡಲಿಲ್ಲ. ಅವರು ಕುರ್ಚಿಯ ಮೇಲೆ ಹತ್ತಿ ಮಾತನಾಡುತ್ತಿದ್ದರು...

(ಗೊಂದಲ)

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು. —ಮಾನ್ಯ ಸಚಿವರಾದಂಥ ಶ್ರೀಮಾನ್ ದೇವೇಗೌಡರು ಏನೋ ಹೇಳುತ್ತಾರೆ.

(ಗೊಂದಲ)

ಶ್ರೀ ಹೆಚ್. ಡಿ ದೇವೇಗೌಡ.—ಮಾನ್ಯ ಅಧ್ಯಕ್ಷರೇ ಸಭೆಯಲ್ಲಿ ಕಾರಣಾಂತರದಿಂದ ಕಾವೇರಿದ ವಾತಾವರಣಕ್ಕೆ ಹೋಗಿ ಅದರಲ್ಲಿಯೇ ತೀರ್ಮಾನ ಮಾಡುವುದಾದರೆ ನಿದುಗಿಂತ ನವ್ಮ ಜನ ಕಡಿಮೆ ಏನೂ ಇಲ್ಲ...

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ಮಂತ್ರಿಗಳಾಗಿ, ಹಿರಿಯ ಸಚಿವರಾಗಿ ಈ ರೀತಿ ಸಮಾಧಾನ ಮಾಡುವುದೇ ! ಇದು ಸರಿಯಲ್ಲ...

(ಗೊಂದಲ)

ಶ್ರೀ ಹೆಚ್. ಡಿ. ದೇವೇಗೌಡ.—ತಾವು ಕುಳಿತುಕೊಳ್ಳಿ...

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ದೇವೇಗೌಡರು ಸದಸ್ಯರು, ಹಿರಿಯ ಸಚಿವರು ಅವರು ಈ ರೀತಿ ಸಮಾಧಾನ ಮಾಡುವುದಕ್ಕೆ ಹೊರಟಿದ್ದಾರೆ.

ಶ್ರೀ ಹೆಚ್. ಡಿ. ದೇವೇಗೌಡ,—ಸ್ವಾಮಿ ತಾವು ಕುಳಿತುಕೊಳ್ಳಿ...

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.—ಬಂಗಾರಪ್ಪನವರೇ ನಿಮಗೆ ನಾನು ಅವಕಾಶ ಕೊಡುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ,—ಸ್ವಾಮಿ. ನಾನು ಹೇಳತಕ್ಕಂಥ ವಿಷಯದ ಬಗ್ಗೆ ಅವಕಾಶ ಸಿಕ್ಕಿಲ್ಲ. ದಯಮಾಡಿ ಸ್ವಲ್ಪ ಕೇಳಿ. ಈ ಸಭೆಯಲ್ಲಿ ಕಾವೇರಿದ ವಾತಾವರಣ ಅಷ್ಟೇ ಅಲ್ಲ ಸನ್ಮಾನ್ಯ ಸದಸ್ಯರು ಈ ರೀತಿ ಮಾಡುವ ಅವಶ್ಯಕತೆ ಇತ್ತೆ ?...

(ಗೊಂದಲ)

ಈ ರೀತಿ ಕಾವೇರಿದ ವಾತಾವರಣಕ್ಕೆ ಸಭೆಯನ್ನು ತೆಗೆದುಕೊಂಡು ಹೋಗುವಂತಹ ಅವಶ್ಯಕತೆ ಇತ್ತೇ? ಈ ರೀತಿಯಾದರೆ ಸದನದ ಕಾರ್ಯಕಲಾಪಗಳನ್ನು ಯಾವ ರೀತಿಯಲ್ಲಿ ನಡೆಸುವುದಕ್ಕೆ ಆಗುತ್ತದೆ ?...

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ಮತ್ತೆ ಕಾವೇರಿಸುತ್ತಿದ್ದೀರಿ.

ಶ್ರೀ ಹೆಚ್. ಡಿ. ವೇವೇಗೌಡ.—ಕಾವೇರಿದ ವಾತಾವರಣವನ್ನು ನಾವು ನೀವು ಎಲ್ಲರೂ ಸರಿ ಪಡಿಸತಕ್ಕಂಥಾದ್ದು ಭಾಷಣದಿಂದ ಅಲ್ಲ. ಸ್ವಾಮಿ ಸ್ವಲ್ಪ ಕೇಳಿ. ನಾನಂ ಇಷ್ಟು ಮಾತ್ರ ಹೇಳಂತ್ತೇನೆ...

(ಗೊಂದಲ)

ಶ್ರೀ ಹೆಚ್. ಡಿ. ದೇವೇಗೌಡ.—ಸ್ವಾಮಿ ಕುಳಿತುಕೊಳ್ಳಿ. ಈಗ ಪತ್ರಿಕೆಗಳಲ್ಲಿ ಬಂದಿರತಕ್ಕಂಥ ವಿಚಾರಗಳ ಬಗ್ಗೆ ವಿರೋಧಪಕ್ಷದ ನಾಯಕರು ಈ ಸದನದಲ್ಲಿ ತಮ್ಮ ಪ್ರತಿಕ್ರಿಯೇ ವ್ಯಕ್ತ ಪಡಿಸುತ್ತಿದ್ದಾಗ ಈ ಸಮಸ್ಯೆ ಉದ್ಭವವಾಯಿತು. ಅದರ ಬಗ್ಗೆ ತೀವ್ರವಾದ, ಮಹತ್ತರವಾದ ವಿಚಾರಗಳನ್ನು ಹೇಳುತ್ತಿದ್ದರು. ಆ ಕೆಲಸ ಮಾಡತಕ್ಕಂಥಾದ್ದಕ್ಕೆ ನಾವು ಕೆಲವು ನಿಯಮಾವಳಿಗಳನ್ನು ಅಳವಡಿಸಿಕೊಂಡು ಆ ನಿಯಮಗಳ ವ್ಯಾಪ್ತಿಯಲ್ಲಿ ಕೆಲಸ ಮಾಡಬೇಕಾಗಿದೆ. ಆದರೆ ಸನ್ಮಾನ್ಯ ಸದಸ್ಯರು ಕುರ್ಚಿಯ ಮೇಲೆ ನಿಂತು ಸದನದಲ್ಲಿ ಅವರ ಪ್ರತಿಕ್ರಿಯೆ ವ್ಯಕ್ತಪಡಿಸುವ ಸನ್ನಿವೇಶಕ್ಕೆ ಹೋದಾಗ ನಾವು ಸದನವನ್ನು ಯಾವ ಮಟ್ಟಕ್ಕೆ ತೆಗೆದುಕೊಂಡು ಹೋಗಿದ್ದೇವೆ ಎನ್ನುವುದು ತಿಳಿಯುತ್ತದೆ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ತಾವು ನೋಡಲಿಲ್ಲವೆಂದು ಕಾಣುತ್ತದೆ. ಅವರು ಕುರ್ಚಿಯ ಮೇಲೆ ಹತ್ತಿ ನಿಂತಿದ್ದರು. ದಯಮಾಡಿ ತಾವೆಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು.—ಈ ರೀತಿ ಎಲ್ಲರೂ ಎದ್ದು ನಿಂತು ಮಾತನಾಡಿದರೆ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಬಂಗಾರಪ್ಪನವರೇ ತಾವು ಸ್ವಲ್ಪ ಈ ಕಡೆ ಕೇಳಿ. ನಾನು ಒಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅದೇನೆಂದರೆ ಇಡೀ ಹಿಂದೂಸ್ಥಾನದಲ್ಲಿಯೇ ಕರ್ನಾಟಕ ವಿಧಾನ ಸಭೆಯ ಸ್ಥಾನ ಮಾನ ಮತ್ತು ಗೌರವವನ್ನು ನಾವು ಸುಮಾರು ೩೦ ವರ್ಷಗಳಿಂದ ಉಳಿಸಿಕೊಂಡು ಬಂದಿದ್ದೇವೆ. ಅದು ಆಳುವ ಪಕ್ಷದವರೇ ಇರಬಹುದು, ಅಥವಾ ವಿರೋಧಪಕ್ಷದವರೇ ಇರಬಹುದು. ಇವೊತ್ತು ನಮಗೆ ಅಧಿಕಾರ ಇರಬಹುದು, ಅಥವಾ ಇಲ್ಲದೇ ಇರಬಹುದು ಆ ಮಾತು ಬೇರೆ. ೧೯೬೭ನೇ ಇಸವಿಯಿಂದ ನಡೆದಂಥ ಹಲವಾರು ಘಟನೆಗಳನ್ನು ಕೋಟ್ ಮಾಡಬಹುದು. ಆದರೆ ಇವೊತ್ತು ನಡೆದಿರತಕ್ಕಂಥಾದ್ದು ಈ ಸದನಕ್ಕೆ ಗೌರವ, ಮಾನ, ಮರ್ಯಾದೆ ತರತಕ್ಕಂಥ ಘಟನೆಯಲ್ಲ. ಯಾವುದೇ ಸನ್ನಿವೇಶವಿರಲಿ, ಎಷ್ಟೇ ತೀವ್ರವಾಗಿರಲಿ ಅದನ್ನು ಮಾತಿನ ಪ್ರಯೋಗದಲ್ಲಿ ಬಳಸಿದರೆ ಅದನ್ನು ನಾನು ಅಡ್ಡಿಪಡಿಸುವುದಿಲ್ಲ. ಅದನ್ನು ಅಡ್ಡಿಪಡಿಸುವುದೂ ಸಹ ಸಾಧ್ಯವಿಲ್ಲ, ಆದರೆ ಮಾನ್ಯ ಸದಸ್ಯರು ಕುರ್ಚಿಯ ಮೇಲೆ ಹತ್ತಿ ನಿಂತು ಪ್ರದರ್ಶನ ಮಾಡಿದ್ದುದು ಈ ಸಭೆಯ ಗೌರವ ಮತ್ತು ಘನತೆಯನ್ನು ಕಾಪಾಡತಕ್ಕಂಥಾದ್ದು ಅಲ್ಲ. ಅವರು ಮಾಡಿದ್ದುದು ಸರಿ ಎಂದು ಮಾನ್ಯ ವಿರೋಧಪಕ್ಷದ ನಾಯಕರಾಗಲಿ ಅಥವಾ ಮಾನ್ಯ ಸದಸ್ಯರಾದಂಥ ಶ್ರೀಮಾನ್ ವೀರಪ್ಪ ಮೊಯಿಲಿಯವರಾಗಲಿ ಅಥವಾ ಮಾಜಿ ಅಧ್ಯಕ್ಷಿಣಿಯಾದ ಶ್ರೀಮಾನ್ ನಾಗರತ್ನಮ್ಮನವರು, ಹಿರಿಯ ಸದಸ್ಯರು

ಅವರಾಗಲಿ ಹೇಳಲಿ. ಅವರು ಸರಿ ಎಂದು ಹೇಳಿದರೆ ನನ್ನದೇನೂ ಆಕ್ಷೇಪಣೆ ಇಲ್ಲ. ಈ ಬಗ್ಗೆ ತಾವೆ ಒಂದು ತೀರ್ಮಾನ ಕೊಡಬೇಕು. ಅಷ್ಟನ್ನು ಮಾತ್ರ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ಪತ್ರಿಕೆಗಳಲ್ಲಿ ಬಂದಿರತಕ್ಕಂಥ ವಿಚಾರಗಳ ಬಗೆ

ಅಧ್ಯಕ್ಷರು.—ಅವರು ಆಡ್ವಂತಾಯರವರ ಬಗ್ಗೆ ಹೇಳಿದರು.

ಶ್ರೀ ಎಸ್. ಬಂಗಾರಪ್ಪ. —ಮಾನ್ಯ ಅಧ್ಯಕ್ಷರೇ ತಾವು ಪದೇ ಪದೇ ಈ ರೀತಿ ಮಾಡಿದರೆ ನಮಗೂ ಬಹಳ ಕಷ್ಟವಾಗುತ್ತದೆ. ನಾವು ಪ್ರಾರಂಭ ಮಾಡಿದ ತಕ್ಷಣ ನೀವೇ ಮಾತನಾಡುತ್ತಿರುತ್ತೀರಿ. ಇದು ಸರಿಯಾಗುವುದಿಲ್ಲ.....

ಅಧ್ಯಕ್ಷರು.—ಅವರು ಕುರ್ಚಿಯ ಮೇಲೆ ಹತ್ತಿ ನಿಂತು ಮಾತನಾಡಿದ್ದರ ಬಗ್ಗೆ.. ...

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಅವರು ಎದ್ದಾಗ ನೀವು ಪ್ರತಿಕ್ರಿಯೆ ವ್ಯಕ್ತಪಡಿಸುವುದು ಬೇಡ. ಸುಮ್ಮನಿದ್ದರೆ ಸಾಕು, ಅಧ್ಯಕ್ಷರಿದ್ದಾರೆ, ನೋಡಿಕೊಳ್ಳುತ್ತಾರೆ.

೧೩೦ ಪಿ.ಎಂ.

ಮಾನ್ಯ ಸಭಾಧ್ಯಕ್ಷರೇ, ಈ ವಿಚಾರ ಪ್ರಸ್ತಾಪ ಮಾಡತಕ್ಕ ಸಂದರ್ಭದಲ್ಲಿ ಇದರ ಪ್ರಾಮುಖ್ಯತೆಯನ್ನು ಅರಿತೇ ತಾವು, ಇದಕ್ಕೆ ತಮ್ಮ ಒಪ್ಪಿಗೆ ಇದೆ ಎಂಬ ಮಾತನ್ನು ಪದೇ ಪದೇ ಹೇಳಿರುವುದರಿಂದ, ಇದನ್ನು ನಿಲುವಳಿ ಸೂಚನೆ ರೂಪದಲ್ಲಿ ತಂದಿದ್ದರೆ, ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದರೆ, ಅವಕಾಶ ಕೊಡುತ್ತಿದ್ದೆ ಎಂದು ಹೇಳಿದ್ದೀರಿ. ೩೩೪ ಇತ್ಯಾದಿ ನಿಯಮಗಳನ್ನು ತಾವು ನನ್ನ ಗಮನಕ್ಕೆ ತಂದಿದ್ದೀರಿ. ಇದಕ್ಕೆ ನಾನು ತಮಗೆ ಅಭಿನಂದಿಸುತ್ತೇನೆ. ಆದರೆ ಈ ವಿಚಾರ ಎಲ್ಲಾ ರಾಜಕೀಯ ಪಕ್ಷಗಳಿಗೆ ಸಂಬಂಧಪಟ್ಟಿರತಕ್ಕ ವಿಚಾರವಾದುದರಿಂದ, ಇದನ್ನು ಪ್ರಸ್ತಾಪ ಮಾಡತಕ್ಕ ಪ್ರಾಮಾಣಿಕ ಪ್ರಯತ್ನವನ್ನು ನಾವು ಹಾಗೂ ಇತರ ಮಾನ್ಯ ಸದಸ್ಯರುಗಳು ಮಾಡಿರುತ್ತಾರೆ. ಈ ಸಂದರ್ಭದಲ್ಲಿ ಮಾತಿಗೆ ಮಾತು ಬೆಳೆದು ಬಿಸಿ ಅಥವಾ ಕಾವೇರಿದ ವಾತಾವರಣ ಉದ್ಭವವಾಯಿತು ಎಂಬ ಮಾತು ನಿಜ. ಕಾವೇರಿಸಬೇಕಾಗುತ್ತದೆ ಎನ್ನತಕ್ಕಂಥ ಮಾತನ್ನು ನಮ್ಮ ಸದಸ್ಯರು ಹೇಳಿದರು ಎಂಬ ಮಾತನ್ನು ಮಾನ್ಯ ದೇವೇಗೌಡರು ಹೇಳಿದರು. ವಿಷಯದ ತೀವ್ರತೆ ಹಾಗೂ ಪ್ರಾಮುಖ್ಯತೆಯನ್ನು ಅನುಸರಿಸಿ, ಕೆಲವೊಮ್ಮೆ ಕಾವೇರತಕ್ಕಂಥ ವಾತಾವರಣ ಮಾಟ್ಟಿದ್ದರೆ, ಕಾವೇರಿಸಬೇಕಾಗುತ್ತದೆ, ಇದರ ಬಗ್ಗೆ ಅನುಮಾನ ಬೇಡ. ತಾವು ಮಾತನಾಡುವುದರಿಂದ ಕೂಡಾ ಕಾವೇರಿರುವುದಕ್ಕೆ ಸ್ವಲ್ಪ ಬಿಸಿ ಸೇರಿತು ಎಂದು ನನ್ನ ಭಾವನೆ.

ಶ್ರೀ ಎಚ್.ಡಿ. ದೇವೇಗೌಡ —ಮಾನ್ಯ ವಿರೋಧ ಪಕ್ಷದ ನಾಯಕರ ಮಾತಿಗೆ ಅಡ್ಡಿಪಡಿಸುವುದಕ್ಕೆ ನಾನು ಹೋಗುವುದಿಲ್ಲ. ಅವರು ಈ ಪದ ಪ್ರಯೋಗ ಮಾಡಿದರು ಅದು ಸಂಸದೀಯ ವ್ಯವಸ್ಥೆಗೆ ವಿರೋಧವಾದುದು ಎಂದು ವಾದ ಮಾಡಲಿಲ್ಲ. ನಮ್ಮ ಮುಂದೆ ಇರತಕ್ಕಂಥ ಪ್ರಶ್ನೆ ಮಾನ್ಯ ಆಡ್ವಂತಾಯರವರು ಖುರ್ಚಿ ಮೇಲೆ ನಿಂತು ಪ್ರತಿಭಟನೆ ವ್ಯಕ್ತಪಡಿಸತಕ್ಕಂಥಾದ್ದು ಈ ಸದನಕ್ಕೆ ಗೌರವ ತೋರಿಸತಕ್ಕಂಥ ವರ್ತನೆಯೇ ಎಂಬುದು. ಇದರ ಬಗ್ಗೆ ಮೊದಲಂ ಹೇಳಿ ನಂತರ ಅವರು ಬೇಕಾದರೆ ವಾಖ್ಯಾನ ಮಾಡಲಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಹಾಗಾದರೆ ಮಾನ್ಯ ರಾಚಯ್ಯನವರು ಹೊರಗಡೆ ಬನ್ನಿ ಎಂದೂ ಹೇಳಿದ್ದು, ಅದಕ್ಕೆ ಮಾತ್ರ ಏನೂ ಇಲ್ಲವೇ ? ನಾವು ಕೇಳಿದ್ದೇವೆ ಆ ಮಾತನ್ನು.

(ಗೊಂದಲ)

ಶ್ರೀ ಎಂ. ರಘುಪತಿ.—ಹೊರಗಡೆ ಬನ್ನಿ ಎಂದಲ್ಲ, ಹೊರಗಡೆ ಈ ಮಾತನ್ನು ಹೇಳಿ ಎಂದು ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಈ ಮಾತನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಇದೂ ಕೂಡ ಸದನಕ್ಕೆ ಗೌರವ ತರುತ್ತದೆಯೇ ಎಂಬುದನ್ನು ಕೇಳಿರಿ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ನಿಮಿಷ ಈಲ್ಡ್ ಆದರೆ ಹೇಳುತ್ತೇನೆ, ಸದನದ ಹೊರಗೆ ಈ ಮಾತನ್ನು ಹೇಳಿ ಎಂದು ಹೇಳತಕ್ಕದ್ದು.

(ಗೆ ೦ದಲ)

ಶ್ರೀ ಹೆಚ್. ಡಿ. ದೇವೇಗೌಡ.—ಸ್ವಲ್ಪ ದಯವಿಟ್ಟು ಒಂದು ನಿಮಿಷ ಇರಿ. ಆದೇ ಜಾಗದಲ್ಲಿ ನಾವು ಕುಳಿತುಕೊಂಡಿದ್ದಂಥ ಕಾಲದಲ್ಲಿ ಇಲ್ಲಿ ಕುಳಿತಿರತಕ್ಕಂಥ ಮಂಖ್ಯೆ ಮಂತ್ರಿಗಳು ಅನೇಕ ಸಲ ಈ ಮಾತನ್ನು ಹೇಳಿದ್ದಾರೆ. ಈ ಸದನದಲ್ಲಿ ಪ್ರತಿಯೊಬ್ಬ ಸದಸ್ಯನಿಗೂ ತನ್ನದೇ ಆದ ಹಕ್ಕಿದೆ. ಅವನು ಮಾತನಾಡತಕ್ಕಂಥ ಕಾಲದಲ್ಲಿ ಅದು ಸತ್ಯ ಇರಬಹುದು, ಅಸತ್ಯ ಇರಬಹುದು, ಆ ಮಾತನ್ನು ಯಾರೂ ಪ್ರಶ್ನೆ ಮಾಡುವುದಕ್ಕೆ ಆಗುವುದಿಲ್ಲ. ಇದು ಪ್ರಿವಿಲೇಜ್ ಇದೆ. ಆದರೆ ಹೊರಗಡೆ ಮಾತನಾಡುವಾಗ ಸರಿಯಾದ ಆಧಾರ ಇಲ್ಲದೇ ಮಾತನಾಡಿದರೆ ಅದನ್ನು ಪ್ರಶ್ನೆ ಮಾಡುವುದಕ್ಕೆ, ನೊಂದ ಸದಸ್ಯರು ಅಥವಾ ನೊಂದ ನಾಗರೀಕರು ಪ್ರಶ್ನೆ ಮಾಡ ವುದಕ್ಕೆ ಅಧಿಕಾರ ಇದೆ, ಯಾವ ಕೋರ್ಟ್ ಮುಂದೆ ಬೇಕಾದರೂ ಡಿಫಾಮೇಷನ್ ಹಾಕಬಹುದು. ಈ ಸದನದಲ್ಲಿ ಹಿಂದೆ ಈ ರೀತಿ ಮಾಡಿದ್ದಾರೆ ಎಂಬುದನ್ನು ಈ ಸದನದ ಪ್ರೊಸೀಡಿಂಗ್ಸ್ ತೋರಿಸುತ್ತದೆ. ಇದರ ಬಗ್ಗೆ ನಿರ್ಣಯ ಮಾಡಲಿಕ್ಕೆ ಅಧ್ಯಕ್ಷರಿಗೆ ಅಧಿಕಾರ ಇದೆ ಎಂಬ ಮಾತನ್ನು ಹೇಳಿದ್ದೇನೆ. ಇವತ್ತೇನೂ ಇದು ದೊಡ್ಡದಾಗಿ, ಹೊಸದಾಗಿ ಮಾನ್ಯ ರಾಚಯ್ಯನವರು ಮಾಡಿದಂಥ ಪದ ಪ್ರಯೋಗ ಅಲ್ಲ ಅದು.

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ, ಅವರು ಹೇಳಲಿ ಕುಳಿತುಕೊಳ್ಳಿ,

ಶ್ರೀ ಹೆಚ್. ಡಿ. ದೇವೇಗೌಡ.—ರಾಚಯ್ಯನವರು ಹೇಳಿದಂಥ ಪದ ಅಶ್ಲೀಲವಾದದ್ದು, ಸಾಂಸದೀಕ ವ್ಯವಸ್ಥೆಗೆ ಬದ್ಧವಾಗಿಲ್ಲ, ಈ ಚೌಕಟ್ಟಿನಲ್ಲಿ ಈ ರೀತಿ ಪದ ಪ್ರಯೋಗ ಮಾಡಬಾರದು ಎಂಬ ರೂಲಿಂಗ್ ಇದ್ದರೆ, ಅದರ ಬಗ್ಗೆ ಅಧ್ಯಕ್ಷರು ನಿರ್ಣಯ ಕೊಡಬಹುದು. ನಾನು ಎತ್ತಿದಂಥ ಕ್ರಿಯಾ ಲೋಪ ಏನೆಂದರೆ, ಸದನದಲ್ಲಿ ಮಾನ್ಯ ಸದಸ್ಯರು ಖುರ್ಚಿಯ ಮೇಲೆ ನಿಂತು.....

ಶ್ರೀ ಎಸ್. ಬಂಗಾರಪ್ಪ.—ಇದನ್ನು ಒಂದಕ್ಕೆ ಸೀಮಿತಗೊಳಿಸುವುದಕ್ಕೆ ಆಗುವುದಿಲ್ಲ.

ಶ್ರೀ ಹೆಚ್. ಡಿ ದೇವೇಗೌಡ —ತಾವು ಮುಂದಿನ ಸಾಲಿನಲ್ಲಿ ಕುಳಿತಿದ್ದೀರಿ. ಈ ಸದನದಲ್ಲಿ ಅಧಿಕಾರ ನಡೆಸಿದಂಥವರು ಇದ್ದೀರಿ. ತಾವು ಇದನ್ನು ಸಮರ್ಥನೆ ಮಾಡುವುದಾದರೆ ಅದನ್ನು ಸ್ಪೀಕರ್‌ರವರಿಗೆ ನಾನು ಬಿಡುತ್ತೇನೆ. ಅವರು ರೂಲಿಂಗ್ ಕೊಡಬಹುದು.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ —ನಾನು ಹೇಳತಕ್ಕದ್ದು ಯಾರಾದರೂ ಒಬ್ಬ ಮಾನ್ಯ ಸದಸ್ಯರು ಖುರ್ಚಿಯ ಮೇಲೆ ಹತ್ತಿ ನಿಂತು ಪ್ರತಿಭಟನೆ ಮಾಡತಕ್ಕದ್ದು ಸರಿ ಎಂದು ನಮ್ಮ ಅಭಿಪ್ರಾಯವನ್ನು ನಾವು ಹೇಳುವುದಕ್ಕೆ ತಯಾರಾಗಿಲ್ಲ. ನಾವು ಈ ಕಡೆ ತಿರುಗಿಕೊಂಡು ಕುಳಿತಿದ್ದೆವು. ಹಿಂದೆ ಏನು ಆಯಿತು ಎಂಬುದನ್ನು ನಾವು ನೋಡಿಲ್ಲ, ನಾವು ಮುಂದುಗಡೆ ಕುಳಿತಿದ್ದೇವೆ.

ಅಧ್ಯಕ್ಷರು.— ತಪ್ಪಾಗೆ ಕಾಣಿಸುವುದಿಲ್ಲ, ಅದು ಈ ಕಡೆ ಕೊನೆಗೆ ಇದೆ.

(ಗೊಂದಲ)

ಶ್ರೀ ಎಸ್ ಬಂಗಾರಪ್ಪ.—ಅದು ಸರಿ ಎಂಬ ಅಭಿಪ್ರಾಯವನ್ನು ನಾವು ಪ್ರತಿಪಾದನೆ ಮಾಡುವುದಿಲ್ಲ ಒಂದು ವೇಳೆ ಹಾಗೆ ನಡೆದಿದ್ದರೆ. ಇಲ್ಲಿರತಕ್ಕಂಥ ವಿಚಾರ ಒಂದು ವಿಷಯದ ಬಗ್ಗೆ ಚರ್ಚೆ ನಡೆಯುತ್ತಿರ ಬೇಕಾದರೆ, ಇವತ್ತು ಒಬ್ಬ ವ್ಯಕ್ತಿ ಈ ಪಟ್ಟಕ್ಕೆ ಹೋಗಬೇಕಾದರೆ, ಏತಕ್ಕೆ ಆ ಕಡೆಯಿಂದ ಮಾತು ಬಂತು ಎಂಬುದೂ ಅಷ್ಟೇ ಮುಖ್ಯವಾಗುತ್ತದೆ. ನೀವು ಇದರ ಬಗ್ಗೆ ಮಾತ್ರ ಹೇಳುವುದಾಗಲೀ, ಉಳಿದಿರತಕ್ಕಂಥ ವಿಚಾರದಲ್ಲಿ ನಿರ್ಣಯ ಬೇಕಿಲ್ಲ ಎನ್ನತಕ್ಕಂಥಾದ್ದಾಗಲೀ ಸರಿಯಲ್ಲ.

(ಗೊಂದಲ)

ಶ್ರೀ ಡಿ.ಟಿ. ಜಯಕುಮಾರ್.—ಮಾನ್ಯ ಅಧ್ಯಕ್ಷರಾಯ ಅವರು ಬೇಕಾದರೆ ಮಾತನಾಡಲೀ ಆದರೆ ಖುರ್ಚಿ ಮೇಲೆ ನಿಂತುಕೊಳ್ಳಿತಕ್ಕದ್ದಲ್ಲ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಇದೊಂದಕ್ಕೆ ಇದನ್ನು ಸೀಮಿತಗೊಳಿಸುವುದಕ್ಕೆ ಆಗುವುದಿಲ್ಲ. ಆ ವಿಚಾರ ನಾನು ತಿಳಿದುಕೊಳ್ಳಬೇಕಾಗುತ್ತದೆ. ಹಾಗೇನಾದರೂ ಅವರು ಖುರ್ಚಿಯನ್ನು ಹತ್ತಿದ್ದಾರೆಯೇ ಮಾಡಿದ್ದಾರೆಯೇ ಎಂಬುದನ್ನು ತಿಳಿದುಕೊಳ್ಳಬೇಕಾಗುತ್ತದೆ, ಅವರು ಮೇಲೆ ಹತ್ತಿ ನಿಲ್ಲುತಕ್ಕ ಪ್ರಯತ್ನ ಅಲ್ಲ. ನಿಂತುಕೊಳ್ಳುವುದಕ್ಕೆ ಸಾಧ್ಯವಾಗದೇ, ಕಾಲು ಹೀಗೆ ಇಟ್ಟುಕೊಂಡಿದ್ದರು ಎಂಬ ಅಭಿಪ್ರಾಯ ಇದೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ವಿರೋಧ ಪಕ್ಷದ ನಾಯಕರು ಈ ರೀತಿ ವಿಶ್ಲೇಷಣೆ ಮಾಡಂವ್ದುದು ಸರಿಯಲ್ಲ.

(ಗೊಂದಲ)

ಶ್ರೀ ಪಂಡಾಪತಿ.—ಅವರು ಖುರ್ಚಿ ಮೇಲೆ ಹತ್ತಿದ್ದು ಸರಿಯಾದ ಮಾರ್ಗ ಅಲ್ಲ. ಅದನ್ನು ಒಪ್ಪಿಕೊಂಡು ಕ್ಷಮಾಪಣೆ ಕೇಳಿ ಬಿಟ್ಟರೆ ಮುಗಿದು ಹೋಯಿತು.

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ ಒಂದೆರಡು ಮಾತು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ನಾನು ಈ ವಿಚಾರ ಏತಕ್ಕೆ ಪ್ರಸ್ತಾಪ ಮಾಡಿದೆ ಎಂದರೆ ಸಭೆಯ ಘನತೆ ಗೌರವದ ದೃಷ್ಟಿಯಿಂದ ನಾವೆಲ್ಲರೂ ಯೋಗ್ಯವಾದ ವಿಚಾರ ಇಟ್ಟುಕೊಳ್ಳಬೇಕಾಗುತ್ತದೆ. ಇವತ್ತು ಆ ರೀತಿ ಹತ್ತಿದ್ದಾರೆ, ತಾವೂ ಕೂಡಾ ನೋಡಿದ್ದೀರಿ ಎಂಬ ವಿಚಾರ ಹೇಳುತ್ತಿದ್ದೀರಿ. ಅದಕ್ಕೆ ನಾನು ವಿಷಾದ ವ್ಯಕ್ತಪಡಿಸುತ್ತೇನೆ. ನಮ್ಮ ಪಕ್ಷದ ಪರವಾಗಿ ವ್ಯಕ್ತಪಡಿಸುತ್ತೇನೆ.

(ಗೊಂದಲ)

ಶ್ರೀ ಡಿ.ಟಿ. ಜಯಕುಮಾರ್.—ಅವರೇ ಕೇಳಬೇಕು.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಕರೀಗೌಡರೇ ಸ್ವಲ್ಪ ಸುಧಾರಿಸಿಕೊಳ್ಳಿ ಒಂದು ವೇಳೆ ಆ ರೀತಿ ಹತ್ತಿದ್ದರೆ, ಖುರ್ಚಿ ಹತ್ತಿಬಿಟ್ಟಿದ್ದಾರೆ ಎಂದು ಇಟ್ಟುಕೊಳ್ಳಿ, ಖುರ್ಚಿ ಹತ್ತುವುದಲ್ಲ, ಅಲ್ಲಿ ಖುರ್ಚಿಯನ್ನು ಕಿತ್ತು ಹಾಕಿದಂಥ ಘಟನೆಗಳೂ ಕೂಡಾ ನಡೆದಿವೆ. ಸಂಪ್ರದಾಯದ ಪ್ರಕಾರ...

(ಗೊಂದಲ)

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ, ಅದನ್ನು ನನ್ನ ತೀರ್ಮಾನಕ್ಕೆ ಬಿಡಿ. ಬಂಗಾರಪ್ಪನವರೇ ಇದನ್ನು ಸಂಕಲ್ಪಾಯ ಮಾಡುವುದಕ್ಕೆ ಹೇಳಿಬಿಡಿ.

ಶ್ರೀ ಎಸ್. ಬಂಗಾರಪ್ಪ.—ಅವರು ಹತ್ತುವುದಕ್ಕೆ ಏನು ಕಾರಣ ಆಯಿತು. ಬಿಸಿಯಾದ ಮಾತು, ಬಂತುಹತ್ತಿದರು ಆದರೂ ಕೂಡಾ ಅದು ಸರಿ ಎಂಬ ಅಭಿಪ್ರಾಯಕ್ಕೆ ನಾನು ಬರುವುದಿಲ್ಲ.

ಅಧ್ಯಕ್ಷರು.—ಅದನ್ನು ನನಗೆ ಬಿಟ್ಟು ಬಿಡಿ. ಕೃಷ್ಣನ್‌ರವರೇ ತಾವು ಹೇಳಿ.

ಶ್ರೀ ಎಸ್. ಬಂಗಾರಪ್ಪ.—ಆ ಪಕ್ಷದ ಮತಿಯಿಂದ ಕೂಡಾ ಇದೇ ಅಭಿಪ್ರಾಯ ಬೇಕು. ಮಾನ್ಯ ರಾಚಯ್ಯನವರು ಹೇಳಿದಂಥ ಮಾತಿನ ಬಗ್ಗೆ ಕೂಡಾ ಇದೇ ಅಭಿಪ್ರಾಯ ಬರಲಿ ಎರಡನ್ನೂ ಒಟ್ಟಾಗಿ ತೀರ್ಮಾನ ಮಾಡೋಣ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಬಂಗಾರಪ್ಪನವರು ಮಾತನಾಡಿದರು. ವಾತಾವರಣ ಕಾವೇರಿದ್ದೇನೋ ನಿಜ, ವಾತಾವರಣ ಕಾವೇರಕೂಡದು ಎಂಬುದು ನಮ್ಮೆಲ್ಲರ ಅಭಿಪ್ರಾಯ. ಕಾವೇರುವಂಥ ಸಂದರ್ಭಗಳು ಕೆಲವೊಮ್ಮೆ ಬಂದರೂ ಕೂಡ ಅದಕ್ಕೆ ಆದಷ್ಟು

ಬೇಗ ತಣ್ಣೀರೆರಚಿ ಕಡಿಮೆ ಮಾಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಇದರಲ್ಲಿ ಏನಾಗಿದೆ ಎಂದರೆ ಮಾನ್ಯ ರಾಚಯ್ಯನವರು ಕೆಲವು ಪದಗಳನ್ನು ಉಪಯೋಗಿಸಿದರು ಎಂದು, ಈ ಕಡೆಯವರಿಗೂ, ಆ ಕಡೆಯವರಿಗೂ ಕಾವೇರಿದ ವಾತಾವರಣ ಉಂಟಾಯಿತು. ಮಾನ್ಯ ರಾಚಯ್ಯನವರು ಯಾವ ರೀತಿಯ ಪದವನ್ನೂ ಉಪಯೋಗಿಸಿಲ್ಲ ಎಂಬುದು ಆ ಕಡೆಯಿಂದ ವಾದ ಬಂದಿದೆ. ಮಾನ್ಯ ರಾಚಯ್ಯನವರು ಏನಂ ಪದ ಉಪಯೋಗಿಸಿದರೋ ಅದು ಸರಿಯಾಗಿ ಗೊತ್ತಾಗಲಿಲ್ಲ. ಹೊರಗೆ ಬನ್ನಿ ನೋಡಿಕೊಳ್ಳೋಣ ಎಂದು ಹೇಳಿದರೋ ಅಥವಾ ಹೊರಗೆ ಬನ್ನಿ ಆಲ್ತಿ ಮಾತನಾಡೋಣ ಎಂದರೋ, ನಮಗೂ ಗೊತ್ತಾಗಲಿಲ್ಲ. ಬಹಳ ಗಲಾಟೆಯಾಯಿತು. ರೆಕಾರ್ಡ್ ತೆಗೆಸಿ ನೋಡಿ, ಇದು ಸರಿಯಾದ್ದಲ್ಲ ಎಂದರೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ, ಅದು ತಮಗೆ ಬಿಟ್ಟಿದೆ, ತಾವು ಅಧ್ಯಕ್ಷರು ಇದರ ಬಗ್ಗೆ ತಾವು ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಎರಡನೆಯದು, ಉದ್ವೇಗ ಪರಿಸ್ಥಿತಿ ಬಂದರೂ ಸಹ ಈ ಮನೆಯಲ್ಲಿ ನನಗೆ ತಿಳಿದಮಟ್ಟಿಗೆ ಕುರ್ಚಿಯ ಮೇಲೆ ನಿಂತುಕೊಳ್ಳುವ ಮಟ್ಟಕ್ಕೆ ಹೋಗಬಾರದಿತ್ತು. ನಾವು ಕೂಡ, ಇಲ್ಲಿ ಅನೇಕ ಸಲ ಪ್ರತಿಭಟನೆ ತೋರಿಸಿದ್ದೇವೆ. ಪೊನ್ನೆ ಕೂಡ ಮುಂದೆ, ನೆಲದಲ್ಲಿ ಬಂದು ಕುಳಿತಿದ್ದೆವು. ಇನ್ನೂ ಮುಂದೆಯೂ ಕೂಡ ಈ ತರಹ ಸಂದರ್ಭಗಳು ಬರಬಹುದು. ರೂಲ್ ೩೦೭ ನೋಡಿ. ಇದು ಮಾನ್ಯ ಸದಸ್ಯರಿಗೂ ಗೊತ್ತಿದೆ. ಆದರಲ್ಲಿ ಬಹಳ ಸ್ಪಷ್ಟವಾಗಿದೆ. ಇದನ್ನು ನಾನು ಓದುವುದಕ್ಕೆ ಹೋಗುವುದಿಲ್ಲ, ರೂಲ್ ೩೦೭ರ ಪ್ರಕಾರ ಎಲ್ಲರೂ ನಡೆದುಕೊಳ್ಳಬೇಕು. ಎಲ್ಲರೂ ಸಭೆಗೆ ಗೌರವ ಕೊಡಬೇಕು. ಇಲ್ಲದೇ ಹೋದರೆ ಅದಂ ಹಾಸ್ಯಾಸ್ಪದವಾಗುತ್ತದೆ. ಮಾನ್ಯ ಆಡ್ಯಂತಾಯ ಅವರು ನನ್ನ ಸ್ನೇಹಿತರು, ಅವರು ಕ್ಷಮಾಪಣೆ ಕೇಳಿಕೊಳ್ಳಬೇಕು. ಇದರಿಂದ ಈ ಸದನದ ಘನತೆ ಗೌರವವನ್ನು ಎತ್ತಿ ಹಿಡಿದಹಾಗೆ ಆಗುತ್ತದೆ. ಆ ರೀತಿ ಮಾಡಬೇಕೆಂದು ನನ್ನ ಪರವಾಗಿ ಕೇಳಿಕೊಳ್ಳುತ್ತೇನೆ.

ಶ್ರಿ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ರೂಲ್ ೩೩ರ ಪ್ರಕಾರ, ಅಧ್ಯಕ್ಷರು ಕಾರ್ಯಪಾಲನೆ ಮಾಡುವುದು ಮತ್ತು ರೂಲ್ ೩೦೭ರ ಪ್ರಕಾರ ಈ ಸದನದ ಕಾರ್ಯಕಲಾಪ ನಡೆಯಬೇಕೆಂದು ಇದೆ. ಇದರಲ್ಲಿ ಆಗಿದ್ದು ಏನು ? ಮಾನ್ಯ ಸದಸ್ಯರು ಉದಯವಾಣಿ ಪತ್ರಿಕೆಯಲ್ಲಿ ಬಂತು ಎಂದು ಹೇಳಿದರು. ಆದಕ್ಕೆ ೩೩ಳಿಕ್ಕೆ ಉತ್ತರ ರೆಡಿಯಾಗಿದೆ ಎಂದು ಹೇಳುತ್ತಾ ಎದ್ದರು ಕೋಪದಿಂದ ಒಂದಂ ಮಾತು ಹೇಳಿದರು. ಈ ಸಂದರ್ಭದಲ್ಲಿ ಮಾನ್ಯ ರಾಚಯ್ಯನವರು ಹೇಳಿದ್ದುದು ತಪ್ಪು. ನೀವು ಹೊರಗೆ ಬನ್ನಿ ಎಂದು ಅಂದರು. ಆ ರೀತಿ ಮಾತನಾಡಬಾರದಿತ್ತು. ಆ ಮೇಲೆ ಇದರ ಬಗ್ಗೆ ಆಡ್ಯಂತಾಯ ಅವರು.....

(ಗೊಂದಲ)

ಅಧ್ಯಕ್ಷರು.—ತಾವು ದಯಮಾಡಿ ಕುಳಿತುಕೊಳ್ಳಿ. ಸಭೆಯು ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಅವಕಾಶ ಕೊಡಿ. ನಾನು ಎದ್ದು ನಿಂತಾಗ ತಾವು ಕುಳಿತುಕೊಳ್ಳಬೇಕು. ಉದ್ವೇಗದಲ್ಲಿ ಅವಲೇ ಮಾತನಾಡಲೀ, ನೀವೇ ಮಾತನಾಡಲೀ, ಕೆಲವೊಮ್ಮೆ ಈ ರೀತಿ ಆಗುತ್ತದೆ. ಮುಂದೆ ಯಾರೂ ಉದ್ವೇಗದ ಮಾತುಗಳನ್ನು ಆಡುವಂಥಾದ್ದಲ್ಲ. ಈಗ ಅವರು ಕುರ್ಚಿಯ ಮೇಲೆ ಎದ್ದು ನಿಂತುಕೊಂಡರಂ. ಆ ರೀತಿ ಈ ಕಡೆಯವರು ನಿಂತರೂ ತಪ್ಪೆ, ಆ ಕಡೆಯವರು ನಿಂತರೂ ತಪ್ಪೆ. ಮಾನ್ಯ ಬಂಗಾರಪ್ಪನವರಂ ಏನಂ ವಿಷಯ ತಂದರು ಆ ಬಗ್ಗೆ ಹೇಳಿದ್ದೇನೆ. ರೂಲ್ ೩೩ಳಿರ ಪ್ರಕಾರ ನೋಟೀಸ್ ಕೊಟ್ಟರೂ ಇವತ್ತು ತೆಗೆದುಕೊಳ್ಳುತ್ತೇನೆ. ಸ್ಪೆಷಲ್ ಅವಕಾಶ ಕೊಡುತ್ತೇನೆಂದು ಹೇಳಿದ್ದೇನೆ. ಅಡ್ಜರ್ನಮೆಂಟ್ ಮೋಷನ್‌ಗೆ ಮೊದಲೇ ಕೊಟ್ಟಿದ್ದರೂ ಕೂಡ ನಾನು ಅವಕಾಶ ಮಾಡಿಕೊಡುತ್ತಿದ್ದೆ. ಜೀರೋ ಹವರ್ ಮಾಡಬಾರದು ಎಂದು ಪಾರ್ಲಿಮೆಂಟ್‌ನವರೂ ಕೂಡ ಕೊಟ್ಟಿದ್ದಾರೆ, ಇಲ್ಲೂ ಕೂಡ ಕೊಟ್ಟಿದ್ದಾರೆ. ಬಿ.ಎ.ಸಿ.ನಲ್ಲಿ ೩೩ಳಿರ ಪ್ರಕಾರ, ೫ ಮಾಡಬೇಕು, ೧೦ ಮಾಡಬೇಕು ಎಂದು ಇದ್ದರೂ ಕೂಡ ಇಚ್ಚೀಚೆಗೆ ಸುಮಾರು ೧೮-೨೦ ಬಂದರೂ ಕೂಡ ಎಲ್ಲರಿಗೂ ಅವಕಾಶ ಕೊಟ್ಟಿದ್ದೇನೆ. ೩೩ಳಿಕ್ಕೆ ಕೊಡಿ ಎಂದು ಹೇಳಿದ್ದೇನೆ. ಆದ್ದರಿಂದ ಈ ವಿಷಯವನ್ನು ಇಲ್ಲಿಗೆ ಮುಕ್ತಾಯರಿ ಮಾಡೋಣ. ಇವತ್ತು ಇದೇ ಒಂದು ಪರಿಪಾಠ ಆಯಿತೆಂದರೆ ಇವತ್ತು ನೀವು ಮಾಡಬಹುದು, ನಾಳೆ ನಾರಾಯಣ ಕುಮಾರ್ ಮಾಡಬಹುದು. ಈ ರೀತಿ ಮಾಡುವುದು ಮಾನ್ಯ ಸದಸ್ಯರಿಗೊಬ್ಬರಿಗೇ ಅಲ್ಲ, ಇಡೀ ಸದನಕ್ಕೇ ಸರಿಯಾದುದಲ್ಲ. ಆದ್ದರಿಂದ ಮಾನ್ಯ ಸದಸ್ಯರು ಈ ಸದನಕ್ಕೆ ಕ್ಷಮಾಪಣೆ ಕೇಳಿಕೊಳ್ಳಿ. ಮುಂದಿನ ಕಾರ್ಯಕ್ರಮ ಕಾಲಿಂಗ್ ಅಟೆನ್‌ಷನ್ ಇದೆ, ಅದಕ್ಕೆ ಹೋಗೋಣ.

ಶ್ರೀ ಎನ್. ಎಂ. ಆಡ್ಯಂತಾಯ.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವಂಥ ಗೃಹಮಂತ್ರಿಗಳು .....

(ಗೊಂದಲ)

ಅಧ್ಯಕ್ಷರು.—ಎರಡು ಕಡೆಯವರೂ ಕೇಳಿ, ಪ್ರೊವೊಕೇಷನ್ ನೀವು ಮಾಡಬಹುದು, ಅಥವಾ ಅವರು ಮಾಡಬಹುದು. ಒಮ್ಮೊಮ್ಮೆ ಈ ರೀತಿಯು ವಾತಾವರಣ ಉಂಟಾಗುತ್ತದೆ. ಆದರೆ ಮಾತನಾಡುವಾಗ.....

ಶ್ರೀ ಎಸ್. ಬಂಗಾರಪ್ಪ.—ಶಾಂತಿ ಸುವ್ಯವಸ್ಥೆ ಎಂದರೆ, ಪ್ರೊವೊಕೇಷನ್ ಆಗುತ್ತದೆಯೇ ?

ಅಧ್ಯಕ್ಷರು.—ಸಿಟ್ಟಿನಿಂದ ಇವರೂ ಮಾತನಾಡಬಹುದು, ನೀವು ಮಾತನಾಡಬಹುದು. ಆದರೆ ಜಾಗ ಬಿಟ್ಟು ಮೇಲೆ ಎದ್ದು ಮಾತನಾಡಿದ್ದು ತಪ್ಪು ಎಂದು ಅನ್ ಕಂಡೀಷನಲ್ ಆಗಿ ಕೇಳಿಕೊಳ್ಳಿ

ಶ್ರೀ ಎನ್. ಎಂ. ಆಡ್ಯಂತಾಯ.—ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವಂತಹ ಗೃಹ ಮಂತ್ರಿಗಳು.....

(ಗೊಂದಲ)

ಅಧ್ಯಕ್ಷರು.—ಎದ್ದುನಿಂತು, ತಪ್ಪು ಎಂದು ಅಷ್ಟು ಮಾತ್ರ ಹೇಳಿ.

(ಗೊಂದಲ)

ಶ್ರೀ ಎನ್. ಎಂ. ಆಡ್ಯಂತಾಯ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಗಂಭೀರವಾದ ವಾತಾವರಣದ ಬಗ್ಗೆ ಕೇಳಿದಾಗ, ಗೃಹ ಮಂತ್ರಿಗಳು ಹೊರಗೆ ಬನ್ನಿ ಎಂದು ಹೇಳಿದರು. ಆದ್ದರಿಂದ ನಾನು ಹೆದರಿ, ಗಾಬರಿಗೊಂಡು ಈ ರೀತಿ ಮಾಡಬೇಕಾಯಿತು. ಅದಕ್ಕೋಸ್ಕರವಾಗಿ ನಾನು ವಿಷಾದ ವ್ಯಕ್ತ ಪಡಿಸುತ್ತೇನೆ. ನನಗೆ ಹೊರಗೆ ರಕ್ಷಣೆ ಕೊಡಬೇಕು.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ, ತಾವು ಒಂದು ಸೂಚನೆ ಕೊಟ್ಟಿದ್ದೀರಿ. ಆ ಸೂಚನೆಯನ್ನು ಪರಿಪಾಲನೆ ಮಾಡಬೇಕಾದದ್ದು ಈ ಸದನದಲ್ಲಿ ಎರಡೂ ಕಡೆಯವರ ಕರ್ತವ್ಯ.

(ಗೊಂದಲ)

ಅಧ್ಯಕ್ಷರು.—ಇದೇರೀತಿ ನಡೆದುಕೊಳ್ಳುತ್ತಾ ಹೋದರೆ, ಇದು ಮುಗಿಯುವುದಕ್ಕೋ ಬೇಡವೋ ನೀವೇ ಹೇಳಿ. ಇಲ್ಲಿ ತಾವುಗಳು ಇಡೀ ರಾಜ್ಯದ ಹಿತರಕ್ಷಣೆ ಮಾಡುವುದಕ್ಕೆ ಬಂದಿದ್ದೀರಿ. ಜನರ ಕುಂದುಕೊರತೆ ಹೇಳುವುದಕ್ಕೆ ಬಂದಿದ್ದೀರಿ, ಸಲಹೆ ಸೂಚನೆಗಳನ್ನು ಕೊಡುವುದಕ್ಕೆ ಬಂದಿದ್ದೀರಿ. ಎಲ್ಲರಿಗೂ ಅವಕಾಶ ಮಾಡಿಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು.—ಇನ್ನು ಮುಂದೆ, ಇದರ ಬಗ್ಗೆ ಯಾರು ಮಾತನಾಡಿದರೂ, ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ಪ್ರೊವೊಕೇಷನ್ ಎರಡು ಕಡೆಯಿಂದ ಬರಬಹುದು, ಅದನ್ನು ಬಿಟ್ಟುಬಿಡಿ. ಎದ್ದು ನಿಂತದ್ದಾದು ಸರಿಯಲ್ಲ, ತಪ್ಪಾಗಿದೆ ಎಂದು ಹೇಳಿ, ಎಂದು ಹೇಳಿದ್ದೇನೆ,

(ಗೊಂದಲ)

ಶ್ರೀ ಪಂಪಾಪತಿ.—ಕ್ಷಮಾಪಣೆ ಕೇಳಿದ್ದಾರೆ. ಈಗಾಗಲೇ ಅವರು ವಿಷಾದವನ್ನು ವ್ಯಕ್ತಪಡಿಸುತ್ತೇನೆಂದು ಹೇಳಿದ್ದಾರೆ.

(ಗೊಂದಲ)

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೆ, ನಾನು ಪ್ರಾರ್ಥನೆ ಮಾಡಿಕೊಳ್ಳುವುದು ಇಷ್ಟೆ. ಮಾನ್ಯ ಸದಸ್ಯರು ಕ್ಷಮಾಪಣೆ ಕೇಳಬೇಕು. ಅದು ಬಿಟ್ಟು ವಿಷಾದ ವ್ಯಕ್ತಪಡಿಸುತ್ತೇನೆಂದರೆ ವಿಷಾದಕ್ಕೂ ಕ್ಷಮಾಪಣೆಗೂ ಬಹಳ ಅಂತರ ಇದೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಎದ್ದುನಿಂತುಕೊಂಡು ವಿಷಾದ ವ್ಯಕ್ತಪಡಿಸುತ್ತೇನೆಂದು ಹೇಳಿದ್ದಾರೆ. ಮತ್ತು ವಿರೋಧ ಪಕ್ಷದ ನಾಯಕರೂ ಸಹ ಅವರ ಪರವಾಗಿ ಹೇಳಿದ್ದಾರೆ. ಈಗ ಪಂಪಾಪತಿಯವರೂ ಕೂಡ ಎದ್ದುನಿಂತುಕೊಂಡು ಮಾನ್ಯ ಸದಸ್ಯರು ಕ್ಷಮಾಪಣೆ ಹೇಳಿದ್ದಾರೆ ಎಂದು ಹೇಳಿದ್ದಾರೆ. ಆದಂದರಿಂದ ಮುಂದೆ ಈ ಅಜೆಂಡಾದಲ್ಲಿರತಕ್ಕಂಥಾ ಕಾಲಿಂಗ್ ಅಟೆನ್‌ಷನ್‌ನ್ನು ತೆಗೆದುಕೊಳ್ಳೋಣ.

ಶ್ರೀ ಎಂ. ರಘುಂಪತಿ.—ಮಾನ್ಯ ಅಧ್ಯಕ್ಷರೇ, ನಾನು ಒಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ಈ ಸಭೆಯಲ್ಲಿ ಈಗ ಕಾವೇರಿದ ವಾತಾವರಣ ಸೃಷ್ಟಿಯಾಗುವುದು, ಉದ್ವಪವಾಗುವುದನ್ನು ನಾವು ನೋಡಿಕೊಂಡು ಬಂದಿದ್ದೇವೆ. ಆದರೆ ಈಪೊತ್ತು ಏನು ನಡೆಯಿತು

(ಗೊಂದಲ)

(೧೦-೧೫ಜನ ಸದಸ್ಯರು ಎದ್ದುನಿಂತುಕೊಂಡು ಮಾತನಾಡಲು ಶುರು ಮಾಡಿದರು)

ಅಧ್ಯಕ್ಷರು.—ಎಲ್ಲರೂ ಕೂಳಿತುಕೊಳ್ಳಿ. ಶ್ರೀಮಾನ್ ಪಂಪಾಪತಿಯವರು ಎದ್ದುನಿಂತುಕೊಂಡು ಮಾನ್ಯ ಸದಸ್ಯರು ಕ್ಷಮಾಪಣೆ ಹೇಳಿದರು ಎನ್ನುವುದರ ಬಗ್ಗೆ ಹೇಳಿದ್ದಾರೆ. ಅವರು ಹೇಳಿರುವುದಕ್ಕೆ ಅವರೇ ಡೈರೆಕ್ಟ್ ಎವಿಡೆನ್ಸ್ ಆದ ಹಾಗಾಯಿತು. ಆದುದರಿಂದ ಇದನ್ನು ಇಲ್ಲಿಗೇ ಮುಂಗಿಸೋಣ.

(ಗೊಂದಲ)

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಈಗ ತಾವು ಇದರ ಬಗ್ಗೆ ಒಂದು ನಿರ್ಣಯ ಕೊಟ್ಟಿದ್ದೀರಿ, ಅವರು ವಿಷಾದ ವ್ಯಕ್ತಪಡಿಸಿದ್ದಾರೆಂದು ಹೇಳಿದ್ದೀರಿ. ಅದನ್ನು ನಾನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ, ಹೋಗಲೂಬಾರದು. ಆದರ ಬಗ್ಗೆ ನಾನು ವಾಖ್ಯಾನವನ್ನು ಮಾಡುವುದಕ್ಕೆ ಹೋಗುವುದಿಲ್ಲ. ತಾವು ಆ ಸ್ಥಾನದಲ್ಲಿ ಇದ್ದುಕೊಂಡು ಅವರು ವಿಷಾದ ವ್ಯಕ್ತಪಡಿಸಿದ್ದಾರೆಂದು ತೀರ್ಪನ್ನು ಕೊಟ್ಟಮೇಲೆ ಅದನ್ನೇ ಅಂತಿಮ ಎಂದು ತಿಳಿದುಕೊಳ್ಳಬೇಕು. ಇನ್ನುಮುಂದೆ ಈ ರೀತಿ ನಡೆಯದೇ ಇರುವ ರೀತಿಯಲ್ಲಿ ನೋಡಿಕೊಳ್ಳಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ರಘುಪತಿ —ನನಗೆ ಕೇಳಲಿಲ್ಲ.

ಅಧ್ಯಕ್ಷರು.—ಅವರು ಕೇಳಲಿಲ್ಲ ಎಂದು ಹೇಳುತ್ತಾರೆ.

ಶ್ರೀ ಯು. ಭೂಪತಿ.—ಅವರು ನಿಮ್ಮ ರೂಲಿಂಗ್ ಮೇಲೆ ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಬಹುದೇ ?

ಶ್ರೀ ಎಂ. ರಘುಪತಿ.—ತಾವು ರೂಲಿಂಗ್ ಕೊಟ್ಟಮೇಲೆ ಆಯಿತು. ಮುಂದೆ ಕಾಲಿಂಗ್ ಅಟೆನ್‌ಷನ್ ತೆಗೆದುಂಕೊಳ್ಳಬಹುದು.

ಗವಂನ ಸೆಳೆಯುವ ಸೂಚನೆ

(i) ಬೀದರ್ ಜಿಲ್ಲೆಯಲ್ಲಿ ಪಠ್ಯ ಪುಸ್ತಕಗಳ ಅಭಾವದಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದು.

ಶ್ರೀ ಮಲ್ಲಾರಿಗೌಡ ಪಾಟೀಲ್.—ಬೀದರ್ ಜಿಲ್ಲೆಯಲ್ಲಿ ಪಠ್ಯಪುಸ್ತಕಗಳ ಅಭಾವದಿಂದ ಪರೀಕ್ಷೆಗೆ ಕೂಳಿತುಕೊಳ್ಳುವ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವ ವಿಚಾರದ ಬಗ್ಗೆ ಮಾನ್ಯ ಶಿಕ್ಷಣ ಮಂತ್ರಿಗಳ ಗವನವನ್ನು ಸೆಳೆಯಬಯಸುತ್ತೇನೆ.

SRI MOHAMED LAIQUDDIN.—MR. Speaker, I have been given a copy of the Kannada version of the Statement of the Hon'ble Minister. I request you Sir, to kindly provide me an English copy of the Statement.

ಅಧ್ಯಕ್ಷರು.—ಇಂಗ್ಲೀಷ್ ಕಾಪಿಯನ್ನು ಮಾಡಿಸಿಕೊಡುತ್ತೇನೆ.

ಶ್ರೀ ಎಂ. ರಘುಪತಿ (ವಿದ್ಯಾ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ವಿವಿಧ ಪುಸ್ತಕಗಳು ಸರಬರಾಜು ಮಾಡಬೇಕಾಗಿರುವ ಸಂಖ್ಯೆ ಳಳಿ ಶೀರ್ಷಿಕೆಗಳು. ಇವುಗಳಲ್ಲಿ ೧೯೭೫-೮೬ರಲ್ಲಿ